ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಶನಿವಾರ, ಅಕ್ಟೋಬರ್ 21, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 159 RNI : 27369/75

janathavani@mac.com
www.janathavani.com
08192 254736 91642 99999


## ವಿಶ್ವಾಸದಿಂದ ಜನಸೇವೆ ಮಾಡಿದಾಗ ನಮ್ಮ ಕಾಯಕಕ್ಕೆ ಗೌರವ ಸಿಗಲು ಸಾಧ್ಯ

### ವಿಜಯಪುರದ ಡೀಮ್ಡ್ ವಿವಿ ಘಟಿಕೋತ್ಸವದಲ್ಲಿ ಎಸ್ಸೆಸ್‌ಗೆ ಡಾಕ್ಟರೇಟ್



ವಿಜಯಪುರ, ಅ. 20 - ಶಾಸಕ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರಿಗೆ ನಗರದ ಬಿಎಲ್ ಡಿಇ ಡೀಮ್ಡ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಪ್ರತಿಷ್ಠಿತ ಬಿಎಲ್‌ಡಿಇ ಸಂಸ್ಥೆಯ ಡೀಮ್ಡ್ ವಿಶ್ವ ವಿದ್ಯಾಲಯದ 11ನೇ ಘಟಿಕೋತ್ಸವ ಇಂದು ನಡೆಯಿತು. ಘಟಿಕೋತ್ಸವದಲ್ಲಿ ಗೌರವ (2ನೇ ಪುಟಕ್ಕೆ)

## 10 ಸಾವಿರ ಕೋಟಿ ರೂ.ಗಳ 2,000 ನೋಟು ಬಾಕಿ

ನವದೆಹಲಿ, ಅ. 20 – ಕೇವಲ 10 ಸಾವಿರ ಕೋಟಿ ರೂ.ಗಳ ಮೊತ್ತದ 2,000 ರೂ.ಗಳ ನೋಟುಗಳು ಮಾತ್ರ ಈಗ ಜನರ ಬಳಿ ಉಳಿದುಕೊಂಡಿವೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. 2,000 ರೂ.ಗಳ ನೋಟು ಗಳನ್ನು ಠೇವಣಿ ಮಾಡಲಾಗುತ್ತಿದೆ ಇಲ್ಲವೇ ವಿನಿಮಯ ಮಾಡಿಕೊಳ್ಳಲಾಗುತ್ತಿದೆ. ಉಳಿದ ಹಣ ಸಹ ವಾಪಸ್ ಬರಲಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

## ಅಧ್ಯಾತ್ಮಿಕ, ನೈತಿಕ ನೆಲೆಗಟ್ಟಿನ ಶಿಕ್ಷಣ ಬೇಕಿದೆ

### 'ಶಿವ ಸಂಕಲ್ಪ ಭವನ' ಉದ್ಘಾಟನಾ ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರ ಬಸವರಾಜ ರಾಜಋಷಿ



ದಾವಣಗೆರೆ, ಅ. 20 – ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ದೋಷಗಳಿವೆ. ಅಧ್ಯಾತ್ಮಿಕ ಹಾಗೂ ನೈತಿಕ ನೆಲೆಗಟ್ಟಿನ ಶಿಕ್ಷಣ ನೀಡುವ ದಿನಗಳು ಬರಬೇಕಿದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ನಿರ್ದೇಶಕ ಬ್ರಹ್ಮಾಕುಮಾರ ಬಸವರಾಜ ರಾಜಋಷಿ ಹೇಳಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾನಗರ ಸೇವಾ ಕೇಂದ್ರದಿಂದ ನೂತನವಾಗಿ ನಿರ್ಮಾಣಗೊಂಡಿರುವ 'ಶಿವ ಸಂಕಲ್ಪ ಭವನ'ದ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಅವರು ಮಾತನಾಡಿದರು.

ದೇಶದಲ್ಲಿ ಸನಾತನ ಗುರುಕುಲಗಳಿದ್ದವು. ಸನಾತನ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯ ಹಾಗೂ ಅಧ್ಯಾತ್ಮಿಕ ಮೌಲ್ಯಗಳಿದ್ದವು. ಪ್ರಸಕ್ತ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಾತ್ಮಿಕ ಶಿಕ್ಷಣ ಬೇಕಿದೆ ಎಂದವರು ಅಭಿಪ್ರಾಯ ಪಟ್ಟರು.

ಆಹಾರ ಪದ್ಧತಿ ತಪ್ಪಾಗಿರುವ ಕಾರಣ ರೋಗಗಳು ಹೆಚ್ಚಾಗುತ್ತಿವೆ. ರಸಗೊಬ್ಬರ ಬಳಸಿ ಆಹಾರ ಬೆಳೆಯುತ್ತಿರುವುದು ಸಮಸ್ಯೆಗೆ ಕಾರಣವಾಗಿದೆ. ಇದರಿಂದ ಚಿಕ್ಕ ವಯಸ್ಸಿಗೆ ನೂರಾರು ಕಾಯಿಲೆಗಳು ಬರುತ್ತಿವೆ ಎಂದೂ ಅವರು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ನಾವು ಭೌತಿಕ ಜೀವನದತ್ತ ಮುಖ ಮಾಡಿದ್ದೇವೆ. ಇದರಿಂದ ಜೀವನ ಯಾಂತ್ರೀಕರಣವಾಗಿ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. (2ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.10.2023 ರಂದು ನಿಧನರಾದ
ಬೇತೂರು ಟ್ರೇಡರ್ಸ್ ಮತ್ತು ಬೇತೂರು ಇಂಡಸ್ಟ್ರೀಸ್
ಮಾಲೀಕರು, ಹಿರಿಯರು, ಮಾರ್ಗದರ್ಶಕರೂ ಆಗಿದ್ದ

**ಬೇತೂರು ಪ್ರಭಣ್ಣ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

**ಬಿ. ಮುರಿಗೆಪ್ಪ ಸಿದ್ದರಾಮಪ್ಪ**
ಮಂಡಿಪೇಟೆ, ದಾವಣಗೆರೆ.


## ಸಾಲದ ಹೊರೆ ವರ್ಗಾವಣೆ ಆಗದಿರಲಿ

ನವದೆಹಲಿ, ಅ. 20 – ವಿತ್ತೀಯ ಕೊರತೆ ನಿರ್ವಹಣೆ ಬಗ್ಗೆ ಸರ್ಕಾರ ಗಮನ ಹರಿಸುತ್ತಿದೆ.



ಸಾಲದ ಹೊರೆಯನ್ನು ಮುಂದಿನ ಪೀಳಿಗೆಗೆ ವರ್ಗಾವಣೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಕೌಟಿಲ್ಯ ಎಕನಾಮಿಕ್ (2ನೇ ಪುಟಕ್ಕೆ)

## ಮಾದಕ ಹಣದೊಳಗೆ ಪಾಕ್ ಸೈನ್ಯ,

ನವದೆಹಲಿ, ಅ. 20 – ಪಾಕಿಸ್ತಾನದ ಸೈನ್ಯ ಹಾಗೂ ಗುಪ್ತಚರ ಸಂಸ್ಥೆಯಾದ ಐ.ಎಸ್.ಐ.ಗಳು ಮಾದಕ ಹಣದಲ್ಲಿ ಸಂಪೂರ್ಣ ಮುಳುಗಿವೆ ಎಂದು ಇತ್ತೀಚೆಗೆ ಬಿಡುಗಡೆಯಾದ ಪುಸ್ತಕವೊಂದರಲ್ಲಿ ತಿಳಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಮಾಧ್ಯಮ ಸಲಹೆಗಾರರಾಗಿದ್ದ ಅಶೋಕ್ ಟಂಡನ್ ಬರೆದಿರುವ 'ದಿ ರಿವರ್ಸ್ ಸ್ವಿಂಗ್ ಕೊಲೊನಿಯಲಿಸಂ ಟು ಕೋ-ಆಪರೇಷನ್' (2ನೇ ಪುಟಕ್ಕೆ)

## ಅರಬ್ಬೀ ಸಮುದ್ರದಲ್ಲಿ ಚಂಡಮಾರುತ

ನವದೆಹಲಿ, ಅ. 20 – ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇದು ಶನಿವಾರ ಬೆಳಿಗ್ಗೆ ಚಂಡಮಾರುತವಾಗಿ ಪರಿವರ್ತನೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ವರ್ಷ ಅರಬ್ಬೀ ಸಮುದ್ರದಲ್ಲಿ ಕಂಡು ಬರುತ್ತಿರುವ ಎರಡನೇ ಚಂಡಮಾರುತ ಇದಾಗಿದೆ. ಈ ಚಂಡಮಾರುತಕ್ಕೆ 'ತೇಜ್' ಎಂಬ (2ನೇ ಪುಟಕ್ಕೆ)

## ಸಿಎ ಸೈಟು ಅವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ ವಶ

ದಾವಣಗೆರೆ, ಅ. 20 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಿಎ ಸೈಟುಗಳನ್ನು ಅಕ್ರಮವಾಗಿ ಖಾತೆ ಮಾಡುತ್ತಿರುವ ಬಗ್ಗೆ ಬಂದ ದೂರಿನ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಪಾಲಿಕೆ ಕಚೇರಿ, ವಲಯ ಕಚೇರಿ-3, ಉಪನೋಂದಣಿ ಅಧಿಕಾರಿಗಳ ಕಚೇರಿ ಹಾಗೂ ದೂಡಾ ಕಚೇರಿಗಳ ಮೇಲೆ ದಾಳಿ ನಡೆಸಿ, ಅವ್ಯವಹಾರಕ್ಕೆ ಸಂಬಂಧಿಸಿದ (2ನೇ ಪುಟಕ್ಕೆ)


## ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ ಪಿ. ಮುರುಳಿಕೃಷ್ಣ ಬಿನ್ ಪಿ. ವೆಂಕಟರಾವ್, ಪಾಮೇನಹಳ್ಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಇವರು ಹಾಗೂ ಎಮ್. ಎಸ್. ಸತ್ಯನಾರಾಯಣ್ ತಂದೆ ಸೂರ್ಯನಾರಾಯಣ, ವಾಸ ಅರಸಾಪುರ, ದಾವಣಗೆರೆ ತಾಲ್ಲೂಕು, ದಾವಣಗೆರೆ** ಇವರುಗಳ ನಡುವೆ ಈ ಪರಿಶಿಷ್ಟದಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಖರೀದಿ ವ್ಯವಹಾರವಾಗಿದ್ದು, ಸದರಿ ವ್ಯವಹಾರದ ಸಂಬಂಧ ಮೇಲೆ ಹೇಳಿದ ವ್ಯಕ್ತಿ ನನ್ನ ಕಕ್ಷಿದಾರರಿಂದ ಮುಂಗಡ ಹಣ ಪಡೆದು ದಿನಾಂಕ 27.07.2011 ರಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ.

ವಾಸ್ತವತೆ ಹೀಗಿರುವಾಗ ಈ ಮೇಲೆ ವಿವರಿಸಿರುವ ವ್ಯಕ್ತಿ ನನ್ನ ಕಕ್ಷಿದಾರರಿಂದ ಮುಂಗಡ ಹಣ ಪಡೆದು ಕ್ರಯದ ಕರಾರನ್ನು ಬರೆದುಕೊಟ್ಟ ಹೊರತಾಗಿಯೂ ಸಹ ಕರಾರಿನ ಷರತ್ತುಗಳ ಅನ್ವಯ ನಡೆದುಕೊಳ್ಳಲಿಲ್ಲದ ಕಾರಣ ನನ್ನ ಕಕ್ಷಿದಾರರು ಸದರಿಯವರ ವಿರುದ್ಧ ವಾಗ್ದಾನ ಅನುಷ್ಠಾನಕ್ಕೆ ಘನ 1 ನೇ ಹೆಚ್ಚುವರಿ ಹಿರಿಯ ದಿವಾಣಿ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ ಇವರಲ್ಲಿ **ಅಸಲು ದಾವೆ ಸಂಖ್ಯೆ 102/2023 (ಓ. ಎಸ್. ನಂಬರ್ 102/2023) ರಂತೆ ದಿನಾಂಕ 04-03-2023 ರಂದು ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮೇಲೆ ಹೇಳಿದ ವ್ಯಕ್ತಿಯಾಗಲೀ ಅಥವಾ ಆತನಿಂದ ಅಧಿಕಾರ ಪಡೆದ ವ್ಯಕ್ತಿಯಾಗಲೀ ಅಥವಾ ಆತನ ಪರವಾಗಿ ಇನ್ನಾರಾಗಲೀ ಪರಿಶಿಷ್ಟದಲ್ಲಿ ವಿವರಿಸಿರುವ ಸ್ವತ್ತನ್ನು ಯಾರಿಗೂ ಯಾವ ವಿಧದಲ್ಲಿಯೋ ಪರಭಾರೆ ಮಾಡಬಾರದೆಂದು ಮಧ್ಯಂತರ ನಿರ್ಬಂಧಕಾಜ್ಞೆ ಸಹ ಕೋರಿರುತ್ತಾರೆ. ಸದರಿ ಅರ್ಜಿಯನ್ನು ಪುರಸ್ಕರಿರುವ ಘನ ನ್ಯಾಯಾಲಯವು ದಿನಾಂಕ 04-03-2023 ರಂದು ಮಧ್ಯಂತರ ನಿರ್ಬಂಧಕಾಜ್ಞೆ ಆದೇಶವನ್ನೂ ಸಹ ಹೊರಡಿಸಿರುತ್ತದೆ.** ಆದುದರಿಂದ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಪರಿಶಿಷ್ಟ ಸೊತ್ತುಗಳಿಗೆ ಸಂಬಂಧಿಸಿದಂತೆ ಯಾರೂ ಸಹ ಮೇಲೆ ಹೇಳಿದ ವ್ಯಕ್ತಿಯೊಂದಿಗೆ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು, ಈ ಸೂಚನೆಯ ಹೊರತಾಗಿಯೂ ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಅದು ಅಸಿಂಧುವಾಗುತ್ತದೆಯಲ್ಲದೆ ನನ್ನ ಕಕ್ಷಿದಾರರಿಗೆ ಹಾಗೂ ಅವರಿಗೆ ಪರಿಶಿಷ್ಟ ಆಸ್ತಿಯಲ್ಲಿ ಇರತಕ್ಕ ಹಕ್ಕಿಗೆ ಸದರಿ ವ್ಯವಹಾರ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ. ಹಾಗೂ ಅಂತಹ ವ್ಯವಹಾರ ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದ್ದಲ್ಲ.

**ಪರಿಶಿಷ್ಟ ಸೊತ್ತುಗಳ ವಿವರ**

ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ, (ಕಾವೇರಿ ಅಪಾರ್ಟ್‌ಮೆಂಟ್ ಪಕ್ಕ) ಬರತಕ್ಕ ಸೈಟ್ ನಂ. 13, ಡೋರ್ ನಂ. 3625/13, 9.00x15.00 ಮೀಟರ್, ಸೈಟ್ ನಂ. 14, ಡೋರ್ ನಂ. 3625/14, 9.00x15.00 ಮೀಟರ್, ಸೈಟ್ ನಂ. 15, ಡೋರ್ ನಂ. 3625/15, 17.00x15.00 ಮೀಟರ್, ಸೈಟ್ ನಂ. 16 ಡೋರ್ ನಂ. 3625/16, 17.00x13.40+13/2 ಮೀಟರ್, ಸೈಟ್ ನಂ. 17, ಡೋರ್ ನಂ. 3625/17, 9.00X13.55+13.40/2 ಮೀಟರ್ ಮತ್ತು ಸೈಟ್ ನಂ. 18, ಡೋರ್ ನಂ. 3625/18, 9.00x13.70+13.55/2 ಈ ಎಲ್ಲಾ ಸೈಟುಗಳು ಒಂದಕ್ಕೊಂದು ಲಗತ್ತಾಗಿದ್ದು ಇವುಗಳಿಗೆ ಒಟ್ಟು ಚಕ್ಕುಬಂದಿ.

**ಪೂರ್ವ** : ರಸ್ತೆ, **ಪಶ್ಚಿಮ** : ರಸ್ತೆ, **ಉತ್ತರ** : ಸೈಟ್ ನಂ. 12, **ದಕ್ಷಿಣ** : ಇತರರ ಜಮೀನು.

**ಕೆ.ಜಿ.ಕೆ. ಸ್ವಾಮಿ**
**ಎಸ್.ಜಿ. ಮಹಾವೀರ್,**
ನ್ಯಾಯವಾದಿಗಳು,
**ಲಾ ಸಲ್ಯೂಷನ್ಸ್**, ನಂ. 417/4ಎ, 4ಬಿ, ಮೊದಲನೇ ಮಹಡಿ, ಜನತಾವಾಣಿ ಕಛೇರಿ ಎದುರು, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ. **ಮೊ : 98444 13266, 98450 03326**



Davanagere Weather 34° 21°

### ಮಾತು ಮಾಣಿಕ್ಯ

ಮನಸ್ಸು ಎಲ್ಲಕ್ಕೂ ಮೂಲ.
ಅದನ್ನು ಸರಿಪಡಿಸಿಕೊಳ್ಳದ
ಹೊರತು ಇನ್ನಾವುದೂ
ಸರಿಯಾಗದು.

- ಡಿ.ವಿ.ಜಿ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.10.2023 ರಂದು ನಿಧನರಾದ
ಬೇತೂರು ಟ್ರೇಡರ್ಸ್ ಮತ್ತು ಬೇತೂರು ಇಂಡಸ್ಟ್ರೀಸ್
ಮಾಲೀಕರು, ಹಿರಿಯರು, ಮಾರ್ಗದರ್ಶಕರೂ ಆಗಿದ್ದ

**ಬೇತೂರು ಪ್ರಭಣ್ಣ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

**ಶ್ರೀ ವಿನಾಯಕ ಸ್ಟೀಲ್ಸ್**
ರುದ್ರಯ್ಯ ಕಾಂಪ್ಲೆಕ್ಸ್, ಪಿ.ಬಿ ರಸ್ತೆ, ದಾವಣಗೆರೆ-2.






Lowest cost of maintenance##
my Hyundai app
Hyundai Promise Certified Pre-Owned Car
To know more, WhatsApp us on 8447228019
HYUNDAI

*Terms and Conditions Apply. 3 Year Unlimited Warranty is applicable for all cars and up to 7 Years Extended Warranty available on paid basis for select models. Benefits include Consumer offer, Exchange bonus and offers for Corporate / Government employees. i20 benefits mentioned is for pre facelift model. Offers may vary for new model. Visit your nearest Hyundai dealer for more details. Hyundai Reserves the right to withdraw / modify the scheme without prior notice. Hyundai urges you to follow traffic rules – they are meant to keep you safe on roads.

**K J HYUNDAI**
371/271, Avaragere, P B Road, Davangere, Ph: 7022001207 / 7022001205 / 7022042241 / 9148005999
BVKS Layout, Bheemasamudra Main Road, Chitradurga-577501, Ph: 9980759983, 7022898487, 7022001208
NH-13, Holalkere Road, Channagiri Branch - 577213, Ph: 7022425985 / 9148004999

## ಸಂಕ್ಷಿಪ್ತ ಸುದ್ದಿ

**ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನಗಳಲ್ಲಿ ಆರ್.ಆರ್.ಟಿ.ಎಸ್.**
ಸಹಿಬಾಬಾದ್ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೆಹಲಿ - ಮೀರತ್ ಆರ್.ಆರ್.ಟಿ.ಎಸ್. ಯೋಜನೆಯ 17 ಕಿ.ಮೀ. ಮಾರ್ಗಕ್ಕೆ ಚಾಲನೆ ನೀಡಿದ್ದಾರೆ. ಇದೇ ರೀತಿಯ ಸಂಪರ್ಕ ವ್ಯವಸ್ಥೆಯನ್ನು ಉತ್ತರ ಪ್ರದೇಶ, ಹರಿಯಾಣ ಹಾಗೂ ರಾಜಸ್ಥಾನ ನಗರಗಳಿಗೆ ಕಲ್ಪಿಸುವುದಾಗಿ ಪ್ರಧಾನಿ ಪ್ರಕಟಿಸಿದ್ದಾರೆ.

**ಬೆಂಗಳೂರು ಮೆಟ್ರೋ ಮಾರ್ಗಕ್ಕೆ ಪ್ರಧಾನಿ ಚಾಲನೆ**
ಬೆಂಗಳೂರು : ಬೆಂಗಳೂರಿನ ಬೈಯ್ಯಪ್ಪನಹಳ್ಳಿಯಿಂದ ಕೃಷ್ಣರಾಜಪುರ ಹಾಗೂ ಕೆಂಗೇರಿಯಿಂದ ಚಳ್ಳಘಟ್ಟದವರೆಗಿನ ಮೆಟ್ರೋ ಮಾರ್ಗವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಇದು ನಗರ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ನೆರವಾಗಲಿದೆ.

**ಕಾಂಗ್ರೆಸ್ ಜೊತೆ ಯಾರು ನಿಲ್ಲುತ್ತಾರೆ? - ಅಖಿಲೇಶ್ ಪ್ರಶ್ನೆ**
ನವದೆಹಲಿ : ಮಧ್ಯಪ್ರದೇಶದಲ್ಲಿ ಸೀಟು ಹಂಚಿಕೆ ವಿಫಲವಾಗಿದ್ದಕ್ಕೆ ಬೇಸರ ವ್ಯಕ್ತಪಡಿಸಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಕಾಂಗ್ರೆಸ್ ಈ ರೀತಿ ವರ್ತಿಸಿದರೆ ಅದರ ಜೊತೆ ಯಾರು ನಿಲ್ಲುತ್ತಾರೆ? ಎಂದು ಪ್ರಶ್ನಿಸಿದ್ದಾರೆ. ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳೆರಡೂ ಪ್ರತಿಪಕ್ಷವಾದ ಐ.ಎನ್.ಡಿ.ಐ.ಎ. ಒಕ್ಕೂಟದ ಭಾಗವಾಗಿವೆ.

**ಗಗನಯಾನ ಪರೀಕ್ಷೆಗೆ ಕ್ಷಣಗಣನೆ ಆರಂಭ**
ಶ್ರೀಹರಿಕೋಟ : ಗಗನಯಾನಕ್ಕಾಗಿ ಮಾನವ ರಹಿತ ಹಾರಾಟ ಪರೀಕ್ಷೆಗೆ ಕ್ಷಣಗಣನೆ ಆರಂಭವಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ತಿಳಿಸಿದೆ. ಬಾಹ್ಯಾಕಾಶಕ್ಕೆ ಗಗನಯಾತ್ರಿಗಳನ್ನು ಕಳಿಸಲು ಇಸ್ರೋ ಮಹತ್ವಾಕಾಂಕ್ಷಿ ಯೋಜನೆ ಹೊಂದಿದೆ.

**ಮಲಹೊರುವ ಪದ್ಧತಿ ಸಂಪೂರ್ಣ ನಿವಾರಿಸಬೇಕಿದೆ : ಸುಪ್ರೀಂ ಕೋರ್ಟ್**
ನವದೆಹಲಿ : ಮಲಹೊರುವ ಪದ್ಧತಿಯನ್ನು ಸಂಪೂರ್ಣ ನಿವಾರಿಸಬೇಕಿದೆ. ಈ ಅಮಾನವೀಯ ಪದ್ಧತಿಯಲ್ಲಿ ಸಿಲುಕಿರುವವರಿಗೆ ನೆರವಾಗಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕಿದೆ. ಚರಂಡಿಗಳನ್ನು ಸ್ವಚ್ಛಗೊಳಿಸುವಾಗ ಸಾವನ್ನಪ್ಪುವವರ ಕುಟುಂಬಗಳಿಗೆ 30 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

**20 ಒಪ್ಪಂದಗಳಿಗೆ ಪಾಕ್ - ಚೀನಾ ಸಹಿ**
ಇಸ್ಲಾಮಾಬಾದ್ : ಪಾಕಿಸ್ತಾನದ ಹಂಗಾಮಿ ಪ್ರಧಾನ ಮಂತ್ರಿ ಅನ್ವರ್ ಉಲ್ ಹಕ್ ಕಕ್ಕರ್ ಅವರು ಚೀನಾಗೆ ಭೇಟಿ ನೀಡಿದ ಸಂದರ್ಭದಲ್ಲಿ 20 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಇದರಲ್ಲಿ ಬೆಲ್ಟ್ ಅಂಡ್ ರೋಡ್ ಇನಿಷಿಯೇಟಿವ್‌ಗೆ ಹೆಚ್ಚಿನ ಸಹಕಾರ ನೀಡುವುದೂ ಸೇರಿದೆ.

**ಸಮರಗಳಿಗಾಗಿ 105 ಶತಕೋಟಿ ಡಾಲರ್ : ಶ್ವೇತಭವನ**
ವಾಷಿಂಗ್ಟನ್ : ಇಸ್ರೇಲ್ ಹಾಗೂ ಉಕ್ರೇನ್ ಸಮರಗಳಿಗಾಗಿ ಅಮೆರಿಕದ ಶ್ವೇತಭವನ 105 ಶತಕೋಟಿ ಡಾಲರ್‌ಗಳ ನೆರವಿನ ವಿವರಗಳನ್ನು ಪ್ರಕಟಿಸಿದೆ. ದೇಶೀಯ ರಕ್ಷಣಾ ವ್ಯವಸ್ಥೆಯಲ್ಲಿ ಹೆಚ್ಚಿನ ಹೂಡಿಕೆ, ಮಾನವೀಯ ನೆರವು ಹಾಗೂ ಅಮೆರಿಕ – ಮೆಕ್ಸಿಕೋ ಗಡಿಯಿಂದ ವಲಸೆ ಬಂದವರಿಗೆ ನೆರವು ನೀಡುವುದೂ ಇದರಲ್ಲಿ ಸೇರಿದೆ.

## ನಗರದ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ಚಂಡಿಕಾ ಹೋಮ



ದಾವಣಗೆರೆ, ಅ. 20- ಸ್ಥಳೀಯ ಕೆಟಿಜೆ ನಗರ, ಮೂರನೇ ಮುಖ್ಯ ರಸ್ತೆ, 11 ಮತ್ತು 12ನೇ ತಿರುವಿನಲ್ಲಿರುವ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 22ರ ಭಾನುವಾರ ಮುಂಜಾನೆ ದುರ್ಗಾಷ್ಟಮಿಯಂದು ಚಂಡಿಕಾ ಹೋಮ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ. ಚಂಡಿಕಾ ಹೋಮದಲ್ಲಿ ಭಾಗವಹಿಸಲಿಚ್ಛಿಸುವ ಭಕ್ತಾದಿಗಳು ದೇವಸ್ಥಾನದಲ್ಲಿ ಹೆಸರು ನೋಂದಾಯಿಸಬಹುದು. ದಿನಾಂಕ 23ರ ಸೋಮವಾರ ಆಯುಧ ಪೂಜೆ, ದಿ. 24ರ ಮಂಗಳವಾರ ಸಂಜೆ 4.30ಕ್ಕೆ ಬನ್ನಿ ಮುಡಿಯುವುದು, ಅಂಬುಛೇದನ, ಪಲ್ಲಕ್ಕಿ ಉತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## ವಿನೂತನ ಮಹಿಳಾ ಸಮಾಜದಿಂದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಅ. 20- ವಿನೂತನ ಮಹಿಳಾ ಸಮಾಜದಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಭಾಷೆ, ಕನ್ನಡತನ ಉಳಿಸುವಲ್ಲಿ ಕನ್ನಡಿಗರ ಪಾತ್ರ ವಿಷಯದ ಬಗ್ಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ಪ್ರಬಂಧವನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಬರೆದು, ಹೇಮಾ ಜಿ. ಶೇಟ್, ನಂ. 1977, 7ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ ಇಲ್ಲಿಗೆ ಇದೇ ದಿನಾಂಕ 23ರ ಸೋಮವಾರದೊಳಗೆ ತಲುಪಿಸಲು ಕೋರಿದೆ. ವಿವರಗಳಿಗೆ 87623 91950ಗೆ ಸಂಪರ್ಕಿಸಬಹುದು ಎಂದು ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಕಾ ಮಂಜುನಾಥ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕೊರವಜ್ಜಿ ನೃತ್ಯ ರೂಪಕ

ಸಾರ್ವಜನಿಕ ವಿಜಯದಶಮಿ ಮಹೋತ್ಸವ ವತಿಯಿಂದ ಹಮ್ಮಿಕೊಂಡಿರುವ ದಸರಾ ಕಾರ್ಯಕ್ರಮದಲ್ಲಿ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ಮೈದಾನದಲ್ಲಿ ಇಂದು ಸಂಜೆ 4.30 ಕ್ಕೆ ರಾಷ್ಟ್ರ ಸೇವಿಕಾ ಸಮಿತಿ ವತಿಯಿಂದ ಲಲಿತಾ ಸಹಸ್ರನಾಮ ಹಾಗೂ ದೇವಿ ಭಜನಾ ಪಠಣ ನಡೆಯುವುದು. ಶ್ರೀ ಲಲಿತಾ ಭಜನಾ ಮಂಡಳಿಯವರಿಂದ ಕೊರವಜ್ಜಿ ನೃತ್ಯ ರೂಪಕ ಹಾಗೂ ದಾಂಡಿಯಾ ನೃತ್ಯ ನಡೆಯುವುದು.

## ಶಾಮನೂರಿನಲ್ಲಿ ಇಂದು ಶನಿ ಪುರಾಣ

ದಾವಣಗೆರೆ - ಶಾಮನೂರಿನ ಮಾಲಸಾಂಬ ಗಂಗಮಾಳಮ್ಮ ದೇವಸ್ಥಾನದಲ್ಲಿ ಇಂದು ರಾತ್ರಿ 7 ಗಂಟೆಗೆ ದೀಪಾರಾಧನೆ, ಶನಿ ಪುರಾಣ ನಡೆಯುವುದು. ಮಲ್ಲಶೆಟ್ಟಿಹಳ್ಳಿ ಬಸವರಾಜಪ್ಪ ಮತ್ತು ಕೆ.ಎಸ್. ಮಹಾಂತೇಶ್, ಕು. ಲಿಂಗರಾಜು, ಕು. ಪೂಜಾ (ಶಾಮನೂರು) ಪುರಾಣ ನಡೆಸಿಕೊಡುವರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 19.10.2023 ರಂದು
ನಿಧನರಾದ
ದಾವಣಗೆರೆ ವಿಶ್ವವಿದ್ಯಾಲಯದ
ಡಿಪಾರ್ಟ್‌ಮೆಂಟ್
ಆಫ್ ಎಂ.ಕಾಂ.ನ ಪ್ರೊಫೆಸರ್
**ಡಾ|| ಹೆಚ್. ಎಸ್. ಅನಿತಾ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ...

**ಆಡಳಿತ ಮಂಡಳಿ, ಪ್ರಾಚಾರ್ಯರು**
**ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ**

**ಚೈತನ್ಯ ಹೈಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.


# ವಿಶ್ವಾಸದಿಂದ ಜನಸೇವೆ ಮಾಡಿದಾಗ ನಮ್ಮ ಕಾಯಕಕ್ಕೆ ಗೌರವ ಸಿಗಲು ಸಾಧ್ಯ

**(1ನೇ ಪುಟದಿಂದ)** ಡಾಕ್ಟರೇಟ್ ಸ್ವೀಕರಿಸಿ ಮಾತನಾಡಿದ ಎಸ್ಸೆಸ್, ವಿಶ್ವಾಸದಿಂದ ಜನಸೇವೆ ಮಾಡಿದರೆ ಎಲ್ಲರೂ ನಮ್ಮ ಕಾಯಕವನ್ನು ಗುರುತಿಸಿ ಗೌರವಿಸುತ್ತಾರೆ ಎಂದು ಪ್ರತಿಪಾದಿಸಿದರು.

ಈಗಾಗಲೇ ನನಗೆ ಮೂರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ದೊರಕಿದ್ದು, ಇದು ನಾಲ್ಕನೇಯ ಗೌರವವಾಗಿದೆ. ಇದಕ್ಕೆಲ್ಲ ನಾವು ಮಾಡುವ ಒಳ್ಳೆಯ ಕೆಲಸಗಳೇ ಕಾರಣ. ನಾನು ಏಳು ಬಾರಿ ಶಾಸಕನಾಗಿದ್ದೇನೆ.

ಒಂದು ಬಾರಿ ಸಂಸದನಾಗಿ ಸೇವೆ ಸಲ್ಲಿಸಿದ್ದೇನೆ. ನನ್ನ ನಿಷ್ಠೆಯನ್ನು ಪರಿಗಣಿಸಿ ಪಕ್ಷ ಪ್ರತಿ ಬಾರಿ ನನಗೆ ಅವಕಾಶ ನೀಡಿದೆ ಎಂದು ಅವರು ಹೇಳಿದರು.

ಈಗ ಪದವಿ ಪಡೆದಿರುವ ವೈದ್ಯರು ತಾವು ಮಾಡುವ ದುಡಿಮೆಯಲ್ಲಿ ಹತ್ತು ಪೈಸೆಯಷ್ಟಾದರೂ ದಾನ ಧರ್ಮದ ಸೇವೆಗೆ ನೀಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಈ ಹಿಂದೆ ಎಸ್. ನಿಜಲಿಂಗಪ್ಪನವರು ಅಧಿಕಾರದಲ್ಲಿದ್ದಾಗ ಬೆಳಗಾವಿ, ಕಲಬುರಗಿ, ದಾವಣಗೆರೆಗಳಿಗೆ ಮೆಡಿಕಲ್ ಕಾಲೇಜುಗಳನ್ನು ನೀಡಿದ್ದರು. ನಂತರ ವಿಜಯಪುರದಲ್ಲಿ ಬಿಎಲ್‌ಡಿಇ ಮತ್ತು ಬಾಗಲಕೋಟೆಯಲ್ಲಿ ಬಿವಿವಿಎಸ್ ಮೆಡಿಕಲ್ ಕಾಲೇಜುಗಳು ಆರಂಭವಾಗಿವೆ. ಹೆಚ್ಚೆಚ್ಚು ಕಾಲೇಜುಗಳು ಪ್ರಾರಂಭವಾದರೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುತ್ತದೆ. ಈಗ ದೇಶ ಮತ್ತು ವಿದೇಶಗಳಲ್ಲಿ ಎಲ್ಲಿಯೇ ಹೋದರೂ ಇಲ್ಲಿನ ವೈದ್ಯರು ಸಿಗುತ್ತಾರೆ. ಇದು ಹೆಮ್ಮೆಯ ವಿಷಯ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸಚಿವರಾದ ಎಂ.ಬಿ. ಪಾಟೀಲ್, ಶರಣ ಪ್ರಕಾಶ ಪಾಟೀಲ್, ವಿಧಾನ ಪರಿಷತ್ ಸದಸ್ಯ ಸುನೀಲ ಗೌಡ ಪಾಟೀಲ, ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಸಮಕುಲಪತಿ ಡಾ. ಅರುಣ ಚಂ. ಇನಾಮದಾರ, ಪ್ರಾಚಾರ್ಯ ಪ್ರೊ. ಅರವಿಂದ ಪಾಟೀಲ, ರಿಜಿಸ್ಟ್ರಾರ್ ಪ್ರೊ. ಆರ್.ವಿ. ಕುಲಕರ್ಣಿ, ಅಲೈಡ್ ಹೆಲ್ತ್ ಸೈನ್ಸಸ್ ಡೀನ್ ಡಾ. ಎಸ್.ವಿ. ಪಾಟೀಲ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಎಸ್.ಎಸ್. ದೇವರಮನಿ ಉಪಸ್ಥಿತರಿದ್ದರು.

**ಅಭಿನಂದನೆ :** ಡೀಮ್ಡ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ಎಸ್ಸೆಸ್ ಅವರನ್ನು ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ವೀರಶೈವ-ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಅಭಿನಂದಿಸಿದ್ದಾರೆ.

# ಡಿಕೆಶಿ ವಿರುದ್ಧ ಸಿಬಿಐ ತನಿಖೆ

## ಕಾಂಗ್ರೆಸ್ ಸೇರಲು ಸಿದ್ಧರಾಗಿದ್ದವರಿಗೆ ಅಡ್ಡಿ

ಬೆಂಗಳೂರು, ಅ.20 - ಉದ್ದಿಮೆ ಹಾಗೂ ಗುತ್ತಿಗೆದಾರರ ಮೇಲೆ ಆದಾಯ ತೆರಿಗೆ ದಾಳಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆ ಮುಂದುವರೆಸಲು ನ್ಯಾಯಾಲಯ ನೀಡಿರುವ ಆದೇಶ ಬಿಜೆಪಿ-ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಲು ಅಣಿಯಾಗಿದ್ದವರಿಗೆ ತಡೆಯೊಡ್ಡಿದಂತಾಗಿದೆ.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಪ್ರಭಾವಿ ಬಿಜೆಪಿ ನಾಯಕರು ಸೇರಿದಂತೆ, 16 ಮುಖಂಡರು ಕಮಲ ಹಾಗೂ ತೆನೆ ಇಳಿಸಿ ಹಸ್ತ ಲಾಘವ ಮಾಡಲು ಮುಂದಾಗಿದ್ದರು.

ಇದಕ್ಕಾಗಿ ಕಾಂಗ್ರೆಸ್ ಕಚೇರಿಯಲ್ಲಿ ಕಳೆದ ಒಂದು ವಾರದಿಂದ ಬೃಹತ್ ಸಿದ್ಧತೆಯೂ ನಡೆದಿತ್ತು. ಆದರೆ, ಎರಡೂ ಪ್ರಕರಣಗಳಿಂದ ಬಿಜೆಪಿಯ ಮಾಜಿ ಶಾಸಕಿ ಪೂರ್ಣಿಮ ಮತ್ತು ಅವರ ಪತಿ ಶ್ರೀನಿವಾಸ್ ಬಿಟ್ಟರೆ ಉಳಿದ ಯಾರು ಕೂಡ ಇಂದು ಹಸ್ತ ಲಾಘವ ಮಾಡಲಿಲ್ಲ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು 40ಕ್ಕೂ ಹೆಚ್ಚು ಮುಖಂಡರು ನಮ್ಮ ಜತೆ ಸಂಪರ್ಕದಲ್ಲಿದ್ದು, ಸದ್ಯದಲ್ಲೇ ಅವರು ಬಿಜೆಪಿ-ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಲಿದ್ದಾರೆ ಎಂದು ಹೇಳಿಕೆ ನೀಡಿದ್ದರು.

ಆದರೆ, ಕಳೆದ 15 ದಿನಗಳಲ್ಲಿ ನಡೆದ ರಾಜಕೀಯ ತಿರುವು ಮತ್ತು ಕೇಂದ್ರ ಬಿಜೆಪಿಯ ತಂತ್ರಗಾರಿಕೆಯಿಂದ ಕಾಂಗ್ರೆಸ್‌ನ ನಾಗಾಲೋಟಕ್ಕೆ ಬ್ರೇಕ್ ಬಿದ್ದಿದೆ.

ಇಂದಿನ ಸೇರ್ಪಡೆ ಸಮಾರಂಭಕ್ಕೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಸಮಯ ಮೀಸಲಿಟ್ಟು, ಎಐಸಿಸಿ ಪ್ರಧಾನ ಕಾರ್ಯದರ್ಶಿಗೂ ಆಹ್ವಾನ ನೀಡಿದ್ದರು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಪೂರ್ಣಿಮಾ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ.

ಪಕ್ಷ ಸೇರ್ಪಡೆ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, ಪೂರ್ಣಿಮಾ ಮತ್ತು ಶ್ರೀನಿವಾಸ್ ಸಾಮಾಜಿಕ ನ್ಯಾಯದ ಪರವಾಗಿರುವವರು. ಒಲ್ಲದ ಮನಸ್ಸಿನಿಂದ ಬಿಜೆಪಿಯಲ್ಲಿದ್ದರು. ಈಗ ಕಾಂಗ್ರೆಸ್‌ಗೆ ಬಂದಿದ್ದಾರೆ. ಇವರಿಗೆ ರಾಜಕೀಯವಾಗಿ ಅನ್ಯಾಯ ಆಗಲು ಬಿಡುವುದಿಲ್ಲ ಎಂದು ಅಭಯ ನೀಡಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ಕಾಂಗ್ರೆಸ್ ಪಕ್ಷ ಸೇರುವವರ ದೊಡ್ಡ ಪಟ್ಟಿ ಇದೆ. ಅದನ್ನು ಈಗ ಬಹಿರಂಗಪಡಿಸುವುದಿಲ್ಲ. ಒಬ್ಬೊಬ್ಬರನ್ನೇ ಪಕ್ಷಕ್ಕೆ ಸೇರಿಸಿಕೊಳ್ಳುವ ಕೆಲಸ ಮಾಡುತ್ತೇವೆ. ಈ ಪ್ರಕ್ರಿಯೆ ಇಲ್ಲಿಗೆ ನಿಲ್ಲಬಾರದು. ಪ್ರತಿ ಬೂತ್ ಹಾಗೂ ಹಳ್ಳಿಗಳಲ್ಲಿ ಇದೇ ರೀತಿ ಕಾರ್ಯಕ್ರಮಗಳನ್ನು ಮಾಡಿ ಅಲ್ಲಿನ ಕಾರ್ಯಕರ್ತರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಎಂದು ಹೇಳಿದರು.

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಬೇಕು

## ಅರಸೀಕೆರೆ ಶ್ರೀ ಕೋಲಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮೀಜಿ ಕರೆ



ಹರಪನಹಳ್ಳಿ, ಅ.20- ಸಂಸದ ವೈ. ದೇವೇಂದ್ರಪ್ಪನವರು ಮಕ್ಕಳಿಗೆ ಶಿಕ್ಷಣದ ಜೊತೆ ಜೊತೆಗೆ ಒಳ್ಳೆಯ ಸಂಸ್ಕಾರ ನೀಡಿದ್ದಾರೆ. ಅವರ ಆದರ್ಶ ಜೀವನ ಸಮಾಜಕ್ಕೆ ಮಾದರಿ ಎಂದು ಅರಸೀಕೆರೆ ಶ್ರೀ ಕೋಲಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮೀಜಿ ಶ್ಲಾಘಿಸಿದರು.

ವೈ.ಡಿ.ಅಣ್ಣಪ್ಪ ಅವರು ಬಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಹಾಗೂ ಬಿಜೆಪಿ ಯುವ ಮುಖಂಡ ಪ್ರಶಾಂತ್ ಪಾಟೀಲರ 44ನೇ ಹುಟ್ಟುಹಬ್ಬದ ಪ್ರಯುಕ್ತ ಅರಸೀಕೆರೆ ಗ್ರಾಮದ ಶ್ರೀ ಕೋಲಶಾಂತೇಶ್ವರ ಮಠದಲ್ಲಿ ವೈ.ಡಿ. ಅಣ್ಣಪ್ಪ ಹಾಗೂ ಪ್ರಶಾಂತ್ ಪಟೇಲ್ ಅಭಿಮಾನಿ ಬಳಗ, ಶ್ರೀ ಕೋಲಶಾಂತೇಶ್ವರ ಜನ ಕಲ್ಯಾಣ ಕೇಂದ್ರ, ಕಿಚ್ಚ ಸುದೀಪ್ ಅಭಿಮಾನಿ ಬಳಗದಿಂದ ಇಂದು ಏರ್ಪಡಿಸಿದ್ದ ಅಭಿನಂದನಾ ಹಾಗೂ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಈ ಮಠದಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ವೈ.ಡಿ.ಅಣ್ಣಪ್ಪ, ಪ್ರಶಾಂತ್ ಪಟೇಲ್ ಹಾಗೂ ಎನ್.ಕೊಟ್ರೇಶ್‌ರವರಿಂದ ಯಶಸ್ವಿಯಾಗಿ ನಡೆಯುತ್ತವೆ ಎಂದ ಅವರು, ಈ ಮೂವರಿಗೂ ರಾಜಕೀಯದಲ್ಲಿ ಉಜ್ವಲ ಭವಿಷ್ಯ ಇದೆ ಎಂದು ಶ್ರೀಗಳು ಆಶೀರ್ವದಿಸಿದರು.

ಕಾರ್ಯಕ್ರಮದ ಉದ್ಘಾಟನೆ ನೇರವೇರಿಸಿ ಮಾತನಾಡಿದ ಬಳ್ಳಾರಿ ಸಂಸದ ವೈ.ದೇವೇಂದ್ರಪ್ಪ ಅವರು ಅಧಿಕಾರ ಶಾಶ್ವತವಲ್ಲ, ನಾವು ಇರುವಷ್ಟು ದಿನ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಮಳೆಯಿಲ್ಲದೆ ಬರಗಾಲ ಬಂದಿದೆ, ರೈತರಿಗೆ ಸರ್ಕಾರದಿಂದ ಪರಿಹಾರ ಕೊಡಿಸುವಂತಹ ಕೆಲಸವಾಗಬೇಕು. ಪಕ್ಷ ಯಾವುದೇ ಇರಲಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಎಂದರು.

ಸನ್ಮಾನ ಸ್ವೀಕರಿಸಿದ ಬಿಡಿಸಿಸಿ ಬ್ಯಾಂಕಿನ ನೂತನ ನಿರ್ದೇಶಕ ವೈ.ಡಿ.ಅಣ್ಣಪ್ಪ ಮಾತನಾಡಿ, ಪ್ರಶಾಂತ್ ಪಟೇಲ್ ನನ್ನ ಬಾಲ್ಯದ ಗೆಳೆಯ, ಯಾವುದೇ ಕೆಲಸಗಳಿರಲಿ ನಾವಿಬ್ಬರೂ ಜೊತೆಗೂಡಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ. ಸದಾ ಹೀಗೆ ಶ್ರೀಗಳ ಆಶೀರ್ವಾದ, ಅಭಿಮಾನಿಗಳ ಸಹಕಾರ ನಮ್ಮ ಮೇಲಿರಲಿ ಎಂದು ಹೇಳಿದರು.

ಮಹೇಶ್ ಇವೆಂಟ್ಸ್ ಸಂಗಡಿಗರಿಂದ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗ್ರಾಮ ಪಂಚಾಯ್ತಿ ಅಧ್ಯಕ್ಷ ಎ.ಇನಾಯತ್ ಉಲ್ಲಾ, ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯೆ ವೈ.ಡಿ.ಸುಶೀಲಮ್ಮ, ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯೆ ವಿಶಾಲಾಕ್ಷಮ್ಮ, ಲಕ್ಷ್ಮಿದೇವಿ ಅಣ್ಣಪ್ಪ, ಶ್ವೇತ ಪ್ರಶಾಂತ್ ಪಟೇಲ್, ಶಾಂತ ಕುಮಾರ್, ಚಂದನ, ಮಿಂಚು, ಪ್ರೀತಮ್, ಸಾನ್ವಿ, ವೈಷ್ಣವಿ, ವೈಭವ್, ವೈಶಾಖ್, ಸುನೀತಾ ಶಾಂತಕುಮಾರ್, ಉಪನ್ಯಾಸಕ ದುರುಗೇಶ್, ಪೂಜಾರ್ ಮರಿಯಪ್ಪ, ರೇಖಾ ಕೊಟ್ರೇಶ್, ಕಿಚ್ಚ ಸುದೀಪ್ ಸಂಘದ ಜಿಲ್ಲಾಧ್ಯಕ್ಷ ಹಾದಿಮನಿ ಸಂತೋಷ್, ಬಾಲೇನಹಳ್ಳಿ ಕೆಂಚನಗೌಡ, ಜೆ. ಪರಶುರಾಮ್, ಎ.ಹೆಚ್.ನವೀನ್, ಯೋಗೇಶ್, ಶಿವು, ಸುನೀಲ್, ಹರಿಯಮ್ಮನಹಳ್ಳಿ ಮಾಲತೇಶ್, ಶಶಿಕುಮಾರ್, ಕೊಟ್ರೇಶ್, ಸಿದ್ದೇಶ್ ಇದ್ದರು.

## ನವರಾತ್ರಿ ಏಳನೇ ದಿನದ ಕಾಳರಾತ್ರಿ ದೇವಿಗೆ ನಮನ

ನಮೋ ನಮೋ ನಮೋ ಕಾಳರಾತ್ರಿ ದೇವಿಗೆ
ನಮೋ ನಮೋ ಘೋರ ರೂಪದ ಮಾತೆಗೆ
ನಮೋ ನಮೋ ಖರವಾಹನದ ಶಕ್ತಿಗೆ
ನಮೋ ನಮೋ ಶುಂಭ ನಿಶುಂಭಧ್ವಂಸಿಗೆ



ಕಪ್ಪು ಕೇಶರಾಶಿಯ
ಭಯಂಕರ ದೇವಿಯೇ
ಕಪ್ಪು ಮೈಬಣ್ಣದವಳೆ
ಕಾಳರಾತ್ರಾಂಬೆಯೆ
ತಪ್ಪು ಮಾಡುವವರ
ಶಿಕ್ಷಿಸಿ ತಿದ್ದುವವಳೆ
ಅಪ್ಪಿ ಕೊಂಡು ಭಕ್ತರ
ಕಷ್ಟ ಬಿಡಿಸುವವಳೆ

ಮೂರು ಕಣ್ಣಿನಿಂದ
ಲೋಕ ನೋಡುವಳೆ
ಪರಮ ಕೈಗಳಲ್ಲಿ
ಅಭಯ ವರದ ಕೊಡುವಳೆ
ಎರಡು ಕೈ ಗಳಲ್ಲಿ ಆಯುಧಗಳ ಹಿಡಿದವಳೆ
ತೆರೆದ ವದನದಿಂದ ಜಿಹ್ವೆ ಹೊರಚಾಚುವಳೆ.

ಬಿಡಿಸಿ ದುಷ್ಟಬುದ್ಧಿ ಕೊಡಿಸು ಸದ್ಬುದ್ಧಿ
ಹೊಡೆದು ಆಲಸ್ಯವ ಪಾಲಿಸು ಕೀರ್ತಿ
ನಡೆಸು ನಿನ್ನೆಡೆಗೆ ಸಿರಿಹರಿಗೆ ಪ್ರೀತಿಪಾತ್ರಿ
ಕಡೆತನಕ ಕಾಯಮ್ಮ ತಾಯೆ ಕಾಳರಾತ್ರಿ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಮಿಜೋರಾಂ : ಸಮುದಾಯದ ಹೊರಗೆ ಮದುವೆ ಮಾಡಿಕೊಂಡವರಿಗೆ ಟಿಕೆಟ್ ನೀಡದಂತೆ ಆಗ್ರಹ

ಐಜಾವ್ಲ್, ಅ. 20 – ಸಮುದಾಯದ ಹೊರಗಿನವರ ಜೊತೆ ಮದುವೆ ಮಾಡಿಕೊಂಡ ಮಹಿಳೆಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದು ಆಕ್ಷೇಪಿಸಿ ಮಿಜೋರಾಂನಲ್ಲಿ ವಿದ್ಯಾರ್ಥಿ ಸಂಘಟನೆಯೊಂದು ಪ್ರತಿಭಟನೆ ನಡೆಸಿದೆ.

ಮಿಜೋ ಜಿರ್ಲಾಯಿ ಪಾವ್ಲ್ (ಎಂ.ಝಡ್.ಪಿ.) ಎಂಬ ಸಂಘಟನೆ ಪ್ರತಿಭಟನೆ ನಡೆಸಿದೆ. ಮಿಜೋ ಸಮುದಾಯದ ಹೊರಗಿನವರ ಮದುವೆ ಮಾಡಿಕೊಂಡ ಮಹಿಳೆಯರಿಗೆ ಟಿಕೆಟ್ ನೀಡಬಾರದು ಎಂದು ಈ ಸಂಘಟನೆ ಒತ್ತಾಯಿಸಿತ್ತು.

ಸಮುದಾಯದ ಹೊರಗಿನ ವ್ಯಕ್ತಿಯನ್ನು ಮದುವೆ ಮಾಡಿಕೊಂಡಿರುವ ಮೆರಿಯಂ ಎಲ್. ರಾಂಗ್ಟ್ಲ್ ಅವರನ್ನು ಲುಂಗ್ಲಿ ದಕ್ಷಿಣ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ರಾಂಗ್ಟ್ಲ್ ಅವರು ಗುರ್ಖಾ ಸಮುದಾಯದ ದಿಪೆನ್ ಜೊಲಿಯಾನಾ ಅವರನ್ನು ಮದುವೆಯಾಗಿದ್ದಾರೆ.

ಚುನಾವಣಾ ಆಯೋಗ ನಾಮಪತ್ರ ತಿರಸ್ಕರಿಸದ ಹೊರತು ಅಭ್ಯರ್ಥಿಯನ್ನು ಬದಲಿಸುವುದಿಲ್ಲ ಎಂದು ಕಾಂಗ್ರೆಸ್ ಉಪಾಧ್ಯಕ್ಷ ಲಾಲ್ ತಂಜಾರಾ ಹೇಳಿದ್ದಾರೆ.

ಇದಕ್ಕೂ ಮುಂಚೆ ಬಿಜೆಪಿಯು ತುವಾಲ್ ಕ್ಷೇತ್ರದ ತನ್ನ ಅಭ್ಯರ್ಥಿಯನ್ನು ಬದಲಿಸಿತ್ತು. ಜೂಡಿ ಜೊಹ್ಮಿಂಗ್ಲಿಯಾನಿ ಅವರು ಮಿಜೋ ಪಂಗಡದ ಹೊರಗಿನವರನ್ನು ಮದುವೆಯಾಗಿದ್ದ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿತ್ತು.

# ಕ್ರಿಕೆಟ್ ಪಂದ್ಯಾವಳಿ : ಹುಕ್ಕೇರಿಗೆ ವಕೀಲರ ತಂಡ



ದಾವಣಗೆರೆ, ಅ.20- ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ಪ್ರಥಮ ಬಾರಿಗೆ ರಾಯಲ್ ಲಾಯರ್ಸ್ ವತಿ ಯಿಂದ ನಡೆಸಲಾಗುತ್ತಿರುವ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ದಾವಣಗೆರೆ ಜಿಲ್ಲಾ ವಕೀಲರ ತಂಡ ಹುಕ್ಕೇರಿಗೆ ತೆರಳಿತು. ತಂಡದ ನಾಯಕನಾಗಿ ಅಜಯ್, ಉಪನಾಯಕನಾಗಿ ಬಿ.ಹೆಚ್.ಮಂಜುನಾಥ್, ರಾಜು, ಅರುಣ್, ಕೆ.ಪಿ.ಮಂಜುನಾಥ್, ತಿರುಕಪ್ಪ, ರಮೇಶ್, ಹರೀಶ್, ಹನುಮಂತಪ್ಪ, ಗುರು, ಶಶಿ, ಕರಿಬಸಪ್ಪ, ಉತ್ತಮ್ ಶಾ, ಲಕ್ಷ್ಮಣ್ ನಾಯ್ಕ, ವೆಂಕಟೇಶ್ ಹಾಗೂ ಗೋವಿಂದ, ತರಬೇತುದಾರರಾಗಿ ಪಿ.ವಿ.ಶಿವಕುಮಾರ್ ತೆರಳಿದ್ದಾರೆ.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಯಶಸ್ಸು ಸಾಧಿಸಲಿ ಎಂದು ಜಿಲ್ಲಾ ವಕೀಲರ ಸಂಘವು ಶುಭ ಕೋರಿ ಬೆಳಗಾವಿಗೆ ಬೀಳ್ಕೊಟ್ಟಿದೆ. ಈ ವೇಳೆ ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್.ಅರುಣಕುಮಾರ್, ಸಹ ಕಾರ್ಯದರ್ಶಿ ಎ. ಎಸ್.ಮಂಜುನಾಥ್, ವಕೀಲರಾದ ಆನಂದಪ್ಪ, ಜ್ಯೋತಿ, ಯೋಗೇಶ್ವರಪ್ಪ ಇತರರಿದ್ದರು.

# ಅಧ್ಯಾತ್ಮಿಕ, ನೈತಿಕ ನೆಲೆಗಟ್ಟಿನ ಶಿಕ್ಷಣ ಬೇಕಿದೆ



**(1ನೇ ಪುಟದಿಂದ)** ಒತ್ತಡದಿಂದ ಹೊರ ಬರಲು ಯೋಗ, ಅಧ್ಯಾತ್ಮ ಹಾಗೂ ಧ್ಯಾನ ಅಗತ್ಯ ಎಂದರು.

ಅಧ್ಯಾತ್ಮ ಹೆಚ್ಚಾದಷ್ಟೂ ಧನಾತ್ಮಕ ಚಿಂತನೆಗಳು ಹೆಚ್ಚಾಗುತ್ತವೆ. ಇದರಿಂದ ಸಮಾಜದ ಉನ್ನತಿಯಾಗುತ್ತದೆ. ಇಂತಹ ಪ್ರಗತಿಗಾಗಿ ಅಧ್ಯಾತ್ಮಿಕ ಕೇಂದ್ರಗಳು ಹೆಚ್ಚಾಗಬೇಕು ಎಂದವರು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮಾತನಾಡಿ, ಈಶ್ವರೀಯ ವಿಶ್ವವಿದ್ಯಾಲಯವು 140 ದೇಶಗಳಲ್ಲಿ 4 ಸಾವಿರಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಈ ಕೇಂದ್ರಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಬೇಕಿದೆ. ಈಶ್ವರೀಯ ವಿಶ್ವವಿದ್ಯಾಲಯವು ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು.

ಕೂಡು ಕುಟುಂಬದಲ್ಲಿ ಬೆಳೆದ ಈಗಿನ ಪೀಳಿಗೆ ಧಾರ್ಮಿಕ ಪರಂಪರೆ ಹಾಗೂ ಸಂಸ್ಕಾರ ಪಡೆದಿದೆ. ಮುಂದಿನ ಪೀಳಿಗೆಗೂ ಅಧ್ಯಾತ್ಮ, ಧರ್ಮ ಹಾಗೂ ಪರಂಪರೆ ಕಲಿಸುವ ಅಗತ್ಯವಿದೆ. ಹೀಗಾಗಿ ವಿದ್ಯೆ ಸ್ವಲ್ಪ ಕಡಿಮೆಯಾದರೂ ಸಂಸ್ಕಾರ ಹೆಚ್ಚು ಕಲಿಸಿದರೆ ಮನೆಯಷ್ಟೇ ಅಲ್ಲದೇ, ಸಮಾಜವೂ ಬೆಳೆಯುತ್ತದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್. ಷಣ್ಮುಖಪ್ಪ ಮಾತನಾಡಿ, ಒತ್ತಡ ಎಲ್ಲರಿಗೂ ಇದೆ. ಒತ್ತಡಕ್ಕೆ ಸಿಲುಕಿದ ಎಲ್ಲರಿಗೂ ವೈದ್ಯಕೀಯ ಚಿಕಿತ್ಸೆ ಮೂಲಕ ಪರಿಹಾರ ಸಾಧ್ಯವಾಗದು. ಧ್ಯಾನ, ರಾಜಯೋಗ ಹಾಗೂ ಅಧ್ಯಾತ್ಮಿಕ ತರಗತಿಗಳ ಮೂಲಕ ಔಷಧ ರಹಿತ ಆರೋಗ್ಯಕರ ಜೀವನ ಸಾಧ್ಯ ಎಂದರು.

'ಶಿವ ಸಂಕಲ್ಪ ಭವನ'ದ ಭೂ ದಾನಿ ಶಾಮನೂರಿನ ಶ್ರೀಮತಿ ಲಕ್ಕಮ್ಮ ದ್ಯಾಮಪ್ಪ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಪಾಲಿಕೆ ಸದಸ್ಯೆ ವೀಣಾ, ಪಾಲಿಕೆ ಆಯುಕ್ತೆ ರೇಣುಕಾ, ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಕೃಷ್ಣಾನಾಯ್ಕ, ದಾವಣಗೆರೆ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಲೀಲಾಜಿ, ವಿದ್ಯಾನಗರದ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಗೀತಾ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಉದ್ಯಮಿ ಮೋಹನ್ ಕುಮಾರ್, ಇಂಜಿನಿಯರ್ ಇಂದ್ರಪ್ಪ, ಕೃಷಿ ಕೇಂದ್ರದ ಸಹಾಯಕ ನಿರ್ದೇಶಕ ಶ್ರೀಧರ ಮೂರ್ತಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಮ್ರತಾ ಪ್ರಾರ್ಥಿಸಿದರೆ, ಭೂಮಿಕಾ ಸ್ವಾಗತ ನೃತ್ಯ ಮಾಡಿದರು. ಈಶ್ವರೀಯ ವಿಶ್ವವಿದ್ಯಾಲಯದ ಮಲೇಬೆನ್ನೂರು ಸಂಚಾಲಕರಾದ ಬ್ರಹ್ಮಾಕುಮಾರಿ ಮಂಜುಳಾ ಸ್ವಾಗತಿಸಿದರು.

## ಸಾಲದ ಹೊರೆ ವರ್ಗಾವಣೆ ಆಗದಿರಲಿ

**(1ನೇ ಪುಟದಿಂದ)** ಕಾನ್‌ಕ್ಲೇವ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಟ್ಟಾರೆ ಸಾಲದ ಹೊರೆ ಕಡಿಮೆ ಮಾಡಲು ಸರ್ಕಾರ ಗಮನ ಹರಿಸುತ್ತಿದೆ ಎಂದಿದ್ದಾರೆ. ಸಮಗ್ರ ಆರ್ಥಿಕ ಸ್ಥಿರತೆಯ ಬಗ್ಗೆ ನಾವು ಪರಿಗಣಿಸಿದ್ದೇವೆ. ಮುಂದಿನ ಪೀಳಿಗೆಗೆ ಹೊರೆಯಾಗದ ರೀತಿಯಲ್ಲಿ ನಾವು ವಿತ್ತೀಯ ನಿರ್ವಹಣೆ ಮಾಡುತ್ತಿದ್ದೇವೆ ಎಂದವರು ತಿಳಿಸಿದ್ದಾರೆ.

ಮುಂದಿನ ಪೀಳಿಗೆಗೆ ಸಾಲದ ಹೊರೆಯಾಗುವಂತೆ ಮಾಡುವುದು ಸುಲಭ. ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ಸಾಲದ ಪ್ರಮಾಣ ಹೆಚ್ಚಿಲ್ಲ. ಆದರೂ, ಬೇರೆ ದೇಶಗಳಲ್ಲಿ ನಡೆಸಲಾಗುತ್ತಿರುವ ಹಲವಾರು ಪ್ರಯೋಗಗಳ ಬಗ್ಗೆ ಗಮನಿಸುತ್ತಿದ್ದೇವೆ ಎಂದು ಸೀತಾರಾಮನ್ ಹೇಳಿದ್ದಾರೆ.

## ಮಾದಕ ಹಣದೊಳಗೆ ಪಾಕ್ ಸೈನ್ಯ,

**(1ನೇ ಪುಟದಿಂದ)** ಎಂಬ ಹೆಸರಿನ ಪುಸ್ತಕದಲ್ಲಿ ಈ ಬಗ್ಗೆ ಮಾಹಿತಿ ನೀಡಲಾಗಿದೆ. ಪಾಕಿಸ್ತಾನಕ್ಕೆ ಹಲವು ಮಾರ್ಗಗಳ ಮೂಲಕ ಅಫೀಮು ಹಾಗೂ ಹೆರಾಯಿನ್ ಬರುತ್ತಿದೆ. ಹಳೆಯ ಮಾದಕ ಜಾಲಗಳು ಅಲ್ಲಿ ಇನ್ನೂ ಕಾರ್ಯನಿರ್ವಹಿಸುತ್ತಿವೆ ಎಂದು ಪುಸ್ತಕದಲ್ಲಿ ತಿಳಿಸಲಾಗಿದೆ.

ಮಾದಕದಲ್ಲಿ ಬರುವ ಹಣದಲ್ಲಿ ಸಾಕಷ್ಟು ಪಾಲು ಪಾಕಿಸ್ತಾನದಲ್ಲಿರುವ ಭೂಗತ ದಾವೂದ್ ಇಬ್ರಾಹಿಂಗೆ ಸೇರುತ್ತಿದೆ. ದಾವೂದ್ ಕಳ್ಳಸಾಗಣೆಗೆ ಐ.ಎಸ್.ಐ. ರಕ್ಷಣೆ ಇದೆ ಎಂದೂ ಪುಸ್ತಕದಲ್ಲಿ ಹೇಳಲಾಗಿದೆ. ದಾವೂದ್ ಇಬ್ರಾಹಿಂ ಮಾದಕವವನ್ನು ಹಣವಾಗಿ ಬದಲಿಸಿ ಕೊಡುತ್ತಾನೆ. ಆತನಿಗೆ ಪಾಕಿಸ್ತಾನದಲ್ಲಿ ಪೂರ್ಣ ರಕ್ಷಣೆ ಇದೆ ಎಂದು ಟಂಡನ್ ತಿಳಿಸಿದ್ದಾರೆ.

## ಅವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ ವಶ

**(1ನೇ ಪುಟದಿಂದ)** ದಾಖಲೆ ಗಳನ್ನು ವಶಪಡಿಸಿಕೊಂಡಿದ್ದಾರೆ.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಇಲಾಖೆ ದಾವಣಗೆರೆ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪುರೆ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ನಾಲ್ಕು ಅಧಿಕಾರಿಗಳ ತಂಡವನ್ನು ರಚಿಸಿ ಏಕಕಾಲದಲ್ಲಿ ಸಂಬಂಧಪಟ್ಟ ಕಚೇರಿಗಳ ಮೇಲೆ ದಾಳಿ ನಡೆಸಿದ್ದಾರೆ.

## ಅರಬ್ಬೀ ಸಮುದ್ರದಲ್ಲಿ ಚಂಡಮಾರುತ

**(1ನೇ ಪುಟದಿಂದ)** ಹೆಸರಿಡಲಾಗಿದೆ. ಚಂಡಮಾರುತ ಭಾನುವಾರ ಅತ್ಯಂತ ತೀವ್ರ ಸ್ವರೂಪ ಪಡೆಯಲಿದ್ದು, ದಕ್ಷಿಣ ಓಮನ್ ಕರಾವಳಿಗೆ ತೆರಳಲಿದೆ ಎಂದು ಇದುವರೆಗಿನ ಮುನ್ಸೂಚನೆಗಳು ತಿಳಿಸಿವೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# 26ರಂದು ಬಂಜಾರ ಬುಡಕಟ್ಟು ಸಂಸ್ಕೃತಿ ಉತ್ಸವ

## ಹರಪನಹಳ್ಳಿಯಲ್ಲಿ ಬಂಜಾರ ಪೀಠದ ಶ್ರೀ ಸರ್ದಾರ ಸೇವಾಲಾಲ್ ಸ್ವಾಮೀಜಿ



ಹರಪನಹಳ್ಳಿ, ಅ.20- ಚಿತ್ರದುರ್ಗದಲ್ಲಿ ಇದೇ ದಿನಾಂಕ 26 ಮತ್ತು 27 ರಂದು ಎರಡು ದಿನಗಳ ಕಾಲ ಬಂಜಾರ ಬುಡಕಟ್ಟು (ಲಂಬಾಣಿ) ಸಂಸ್ಕೃತಿ ಉತ್ಸವದ ಅಂಗವಾಗಿ ಅತಿ ಹಿಂದುಳಿದ ಸಮುದಾಯಗಳ ಸಮಾಲೋಚನಾ ಸಭೆ ಹಾಗೂ ಲೋಕ ಕಲ್ಯಾಣಾರ್ಥವಾಗಿ ಸಾಮೂಹಿಕ ಸಂಕಲ್ಪ ಪೂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಚಿತ್ರದುರ್ಗದ ಬಂಜಾರ ಪೀಠದ ಶ್ರೀ ಸರ್ದಾರ ಸೇವಾಲಾಲ್ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಈ ಉತ್ಸವದಲ್ಲಿ ಸಚಿವರುಗಳಾದ ಸತೀಶ್ ಜಾರಕಿಹೊಳಿ, ಶಿವರಾಜ ತಂಗಡಗಿ, ಎಸ್.ಎಸ್. ಮಲ್ಲಿಕಾರ್ಜುನ್, ಉಪಸಭಾಪತಿ ರುದ್ರಪ್ಪ ಲಮಾಣಿ ಸೇರಿದಂತೆ ಬಂಜಾರ ಸಮುದಾಯದ ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಸಮಾಜದ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಸಂಪುಟದಲ್ಲಿ ಬಂಜಾರ ಸಮುದಾಯಕ್ಕೆ ಸಚಿವ ಸ್ಥಾನ ಸಿಗದೇ ಅನ್ಯಾಯವಾಗಿದ್ದು, ಈಗಲಾ ದರೂ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಂಜಾರ ಸಮುದಾಯಕ್ಕೆ ಸಚಿವ ಸ್ಥಾನ ನೀಡುವಂತೆ ಸ್ಥಾನಕ್ಕೆ ಒತ್ತಾಯಿಸಿದ ಅವರು, ಕೇವಲ ಉಪಸಭಾಪತಿ ಸ್ಥಾನ ಕೊಟ್ಟು ಸಮಾಧಾನ ಪಡಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಂಜಾರ ಸಮುದಾಯಕ್ಕೆ ಲೋಕಸೇವಾ ಆಯೋಗದಲ್ಲಿ ಸದಸ್ಯ ಸ್ಥಾನ, ವಿಶ್ವ ವಿದ್ಯಾಲಯದಲ್ಲಿ ಕುಲಪತಿಗಳನ್ನು ನೇಮಕ ಮಾಡಬೇಕು ಹಾಗೂ ತಾಂಡಾ ಅಭಿವೃದ್ಧಿ ನಿಗಮಕ್ಕೆ ಸೂಕ್ತ ಮತ್ತು ಸೃಜನಶೀಲ ಸಮಾಜದ ಬಗ್ಗೆ ಕಾಳಜಿ ಇರುವಂತಹ ವ್ಯಕ್ತಿಯನ್ನು ಅಧ್ಯಕ್ಷರಾಗಿ ನೇಮಕ ಮಾಡಬೇಕೆಂದು ಒತ್ತಾಯಿಸಿದರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಬಂಜಾರ ಸಮುದಾಯದವರು ಗುಳೇ ಹೋಗುವವರ ಸಂಖ್ಯೆ ಹೆಚ್ಚಾಗಿದ್ದು, ಆದ್ದರಿಂದ ವಲಸೆ ಹೋಗುವುದನ್ನು ತಪ್ಪಿಸಲು ಸರ್ಕಾರಕ್ಕೆ ಮನವಿ ಮಾಡಿದರು. ವಲಸೆ ಹೋಗುವ ಕುಟುಂಬದ ಮಕ್ಕಳಿಗೆ ಟೆಂಟ್ ಶಾಲೆ ಹಾಗೂ ಬಂಜಾರ ಸಮುದಾಯದ ಬಡವರಿಗೆ ಸ್ವಯಂ ಉದ್ಯೋಗ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಂಜಾರ ಸಮುದಾಯದವರಿಗೆ ರಾಷ್ಟ್ರೀಯ ಪಕ್ಷಗಳು ಸರಿಯಾಗಿ ಸ್ಥಾನ ಹಂಚಿಕೆ ಮಾಡಿಲ್ಲ. ಆದ್ದರಿಂದ ಮುಂಬರುವ ಲೋಕಸಭಾ ಚುನಾವಣೆಯಲ್ಲಿಯಾದರೂ ಜನಸಂಖ್ಯೆಗೆ ಅನುಗುಣವಾಗಿ ಬಂಜಾರ ಸಮುದಾಯಕ್ಕೆ ಸ್ಥಾನಗಳನ್ನು ಹಂಚಿಕೆ ಮಾಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಂಜಾರ ಸಮಾಜದ ಯುವ ಮುಖಂಡ ಪಿ. ಶಿವಕುಮಾರ್ ನಾಯ್ಕ್, ರಾಜ್ಯ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನಾಯ್ಕ್, ಬಂಜಾರ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಕೆ.ಡಿ. ನಾಯ್ಕ್, ಮುಖಂಡರಾದ ಹರೀಶ್ ನಾಯ್ಕ್, ವೀರೇಶನಾಯ್ಕ್, ಶಶಿಕುಮಾರ್ ನಾಯ್ಕ್, ವಿ. ಮಲ್ಲೇಶನಾಯ್ಕ್, ಶಾಂತಾನಾಯ್ಕ್, ಹರಿಶ್ಚಂದ್ರ ನಾಯ್ಕ್, ನೀಲಾನಾಯ್ಕ್, ಚಂದ್ರನಾಯ್ಕ್, ಕೊಟ್ರೇಶ್ ನಾಯ್ಕ, ಶಾಂತನಾಯ್ಕ, ಪ್ರಸನ್ನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಇಸ್ರೇಲ್ ಜೊತೆ ಸಂಘರ್ಷ : ಲೆಬನಾನ್‌ನಲ್ಲಿ ಹೆಚ್ಚುತ್ತಿದೆ ಸಂಕಷ್ಟ

ಬ್ಯೂರತ್, ಅ. 20 – ಇಸ್ರೇಲ್ ಗಡಿಯಲ್ಲಿ ಸಂಘರ್ಷ ಉಂಟಾಗಿರುವ ಹಿನ್ನೆಲೆಯಲ್ಲಿ ದಕ್ಷಿಣ ಲೆಬನಾನ್‌ನ 4,200ಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಗಡಿಯಲ್ಲಿ ನಡೆಯುತ್ತಿರುವ ಸಂಘರ್ಷ ಯುದ್ಧವಾಗಿ ಪರಿವರ್ತನೆಯಾದರೆ ಬಹು ದೊಡ್ಡ ಸಂಖ್ಯೆಯಲ್ಲಿ ಜನರು ಸ್ಥಳಾಂತರಗೊಳ್ಳಲಿದ್ದು, ಇದಕ್ಕೆ ಸಿದ್ಧವಾಗುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಪ್ರಸಕ್ತ ಸ್ಥಳಾಂತರಗೊಂಡಿರುವ ಜನರು ಗಡಿಯಿಂದ 20 ಕಿ.ಮೀ. ದೂರದಲ್ಲಿರುವ ಟೈರ್ ಎಂಬ ನಗರದ ಮೂರು ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ.

ಕೆಲವರು ತಮ್ಮ ಸಂಬಂಧಿಗಳ ಮನೆಗೆ ಹಾಗೂ ಇನ್ನು ಕೆಲವರು ಬಾಡಿಗೆ ಮನೆಗಳಿಗೆ ತೆರಳಿದ್ದಾರೆ. ಲೆಬನಾನ್ ಹಣಕಾಸು ಸಂಕಷ್ಟದಲ್ಲಿದೆ. ಹೀಗಾಗಿ ದೊಡ್ಡ ಸಂಖ್ಯೆಯಲ್ಲಿ ಜನರು ಸ್ಥಳಾಂತರಗೊಂಡರೆ ಸರ್ಕಾರ ಸಮಸ್ಯೆಗೆ ಸಿಲುಕಲಿದೆ.

ನಾವು ಜನರಿಗೆ ಆಶ್ರಯ ನೀಡಲು ಇನ್ನೊಂದು ಹೊಸ ಶಾಲೆಯನ್ನು ತೆರೆಯಬಹುದು. ಆದರೆ, ಅಗತ್ಯ ಸಂಪನ್ಮೂಲಗಳು ದೊರೆಯದೇ ಇದ್ದರೆ ಸಮಸ್ಯೆಯಾಗುತ್ತದೆ ಎಂದು ಸ್ಥಳೀಯ ವಿಕೋಪ ನಿರ್ವಹಣಾ ಘಟಕದ ಮುಖ್ಯಸ್ಥ ಮೊರ್ತದ ಮಹನ್ನ ಹೇಳಿದ್ದಾರೆ.

ಲೆಬನಾನ್‌ನ ಹೆಜ್ಬೊಲ್ಲಾ ಉಗ್ರವಾದಿ ಸಂಘಟನೆಗಳು ಹಾಗೂ ಲೆಬನಾನ್‌ನಲ್ಲಿರುವ ಪ್ಯಾಲೆಸ್ತೇನ್ ಪರ ಸಂಘಟನೆಗಳು ಲೆಬನಾನ್ ಗಡಿಯಿಂದ ಪ್ರತಿನಿತ್ಯ ಇಸ್ರೇಲ್ ಮೇಲೆ ದಾಳಿ ನಡೆಸುತ್ತಿವೆ. ಇಸ್ರೇಲ್ ಸಹ ಇದಕ್ಕೆ ಪ್ರತಿದಾಳಿ ನಡೆಸುತ್ತಿದೆ. ಅಕ್ಟೋಬರ್ 7ರ ನಂತರ ನಡೆದಿರುವ ಸಂಘರ್ಷದಲ್ಲಿ ಕನಿಷ್ಠ 22 ಜನ ಸಾವನ್ನಪ್ಪಿದ್ದಾರೆ.

ಶುಕ್ರವಾರವೂ ಸಂಘರ್ಷ ಕಂಡು ಬಂದಿದೆ. ಹಲವಾರು ವಿಮಾನಯಾನ ಸಂಸ್ಥೆಗಳು ಬ್ಯೂರತ್‌ಗೆ ತೆರಳುವುದನ್ನು ನಿಲ್ಲಿಸಿವೆ. ಈ ಹಿಂದೆ 2006ರಲ್ಲಿ ಇಸ್ರೇಲ್ ಹಾಗೂ ಹೆಜ್ಬೊಲ್ಲಾ ನಡುವೆ ಒಂದು ತಿಂಗಳ ಕಾಲ ಸಂಘರ್ಷ ನಡೆದಿತ್ತು. ದಕ್ಷಿಣ ಲೆಬನಾನ್ ಹಳ್ಳಿಗಳು ಹಾಗೂ ಬ್ಯೂರತ್‌ನ ದಕ್ಷಿಣ ಭಾಗಗಳಲ್ಲಿ ಇಸ್ರೇಲ್ ಬಾಂಬ್ ದಾಳಿ ನಡೆಸಿತ್ತು.

ಇಸ್ರೇಲ್ ಹಾಗೂ ಹೆಜ್ಬೊಲ್ಲಾ ನಡುವೆ ಇನ್ನೊಂದು ಸಂಘರ್ಷ ನಡೆದರೆ ಟೈರ್ ನಗರ ಸಹ ಸುರಕ್ಷಿತವಾಗಿರುವುದಿಲ್ಲ. 2006ರಲ್ಲಿ ಎಲ್ಲಾ ದಕ್ಷಿಣ ಭಾಗದ ಮೇಲೆ ದಾಳಿ ನಡೆದಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಘರ್ಷದ ನಂತರ ದಕ್ಷಿಣ ಲೆಬನಾನ್‌ನಲ್ಲಿರುವ 300 ಶಾಲೆಗಳ ಪೈಕಿ 52 ಶಾಲೆಗಳನ್ನು ಮುಚ್ಚಲಾಗಿದೆ. ದಾಳಿಗಳು ವ್ಯಾಪಕವಾದರೆ ವಿದ್ಯುತ್ ಹಾಗೂ ನೀರು ಪೂರೈಕೆ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳಿಗೂ ತೊಂದರೆಯಾಗಲಿದೆ.

# ನವಮಿ ಕಾರ್ನಿವಾಲ್ 2.0 ಕಾರ್ಯಕ್ರಮ ಉದ್ಘಾಟಿಸಿದ ಎಸ್ಸೆಸ್





ದಾವಣಗೆರೆ, ಅ. 20 - ಹ್ಯಾಪಿ ಇವೆಂಟ್ ಮತ್ತು ಜನನಿ ಟ್ರಸ್ಟ್ ವತಿಯಿಂದ ರವಿ ಶಾಮನೂರ್ ಫಿಲಂಸ್ ಹಾಗೂ ಗ್ರೀನ್ ಪಾರ್ಕ್ ಇವರ ಸಹಾಯದೊಂದಿಗೆ ದಾವಣಗೆರೆ ನಗರದ ರೇಣುಕಾ ಮಂದಿರದಲ್ಲಿ ಇಂದು ಹಮ್ಮಿಕೊಂಡಿದ್ದ ನವಮಿ ಕಾರ್ನಿವಾಲ್ 2.0 ಕಾರ್ಯಕ್ರಮವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ವನಿತಾ ಸಮಾಜದ ಶ್ರೀಮತಿ ಲತಿಕಾ ದಿನೇಶ್ ಕೆ. ಶೆಟ್ಟಿ, ಉದ್ಯಮಿಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯ ಎ. ನಾಗರಾಜ್ ಮತ್ತು ಇತರರು ಉಪಸ್ಥಿತರಿದ್ದರು.

# ಜಗಳೂರು : ಅರ್ಹರಿಗೆ ಸರ್ಕಾರದ ಸೌಲಭ್ಯಗಳು ತಲುಪಬೇಕು



## ಶಾಸಕ ದೇವೇಂದ್ರಪ್ಪ ಆಶಯ

ಜಗಳೂರು, ಅ. 20 - ಅರ್ಹರಿಗೆ ಸರಕಾರದ ಸೌಲಭ್ಯಗಳು ತಲುಪಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಜನಸಂಪರ್ಕ ಕೇಂದ್ರದ ಮುಂಭಾಗ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ 24 ಫಲಾನುಭವಿಗಳಿಗೆ ದ್ವಿ-ಚಕ್ರ ವಾಹನ ವಿತರಿಸಿ ನಂತರ ಅವರು ಮಾತನಾಡಿದರು.

ದ್ವಿಚಕ್ರ ವಾಹನಗಳನ್ನು ಸದುಪಯೋಗಪಡೆದುಕೊಳ್ಳಬೇಕು. ಲೈಸೆನ್ಸ್ ಇಲ್ಲದೆ ವಾಹನ ಚಾಲನೆ ಮಾಡಬೇಡಿ. ಅಪ್ರಾಪ್ತರ ಕೈಯಲ್ಲಿ ಚಲಿಸಲು ಕೊಡಬೇಡಿ ಎಂದರು. ಮುಂಗಾರು ಮಳೆ ಕೊರತೆಯಿಂದ ಹಿಂಗಾರು ಕೈಕೊಟ್ಟಿದೆ. ತಾಲ್ಲೂಕಿನಲ್ಲಿ ಬರ ತಾಂಡವ ವಾಡುತ್ತಿದೆ. ಸರಳ ಜೀವನ ಸಾಗಿಸೋಣ ಸರ್ಕಾರದ ಯೋಜನೆಗಳು ಕುಟುಂಬ ನಿರ್ವಹಣೆಗೆ ಪೂರಕವಾ ಗಲಿವೆ. ಅಧಿಕಾರಿಗಳು ಮಾಡುವ ಕೆಲಸ ವಿಳಂಬ ವಾದರೆ, ಅದು ಭ್ರಷ್ಟಾಚಾರದ ಇನ್ನೊಂದು ಮುಖ. ಕರ್ತವ್ಯ ಪಾಲಿಸಬೇಕು. ಕೆಲವರು ವಿನಾಕಾರಣ ಸುಳ್ಳು ಸೃಷ್ಟಿಸಿ ಅಪಪ್ರಚಾರ ಮಾಡುವವರಿದ್ದಾರೆ. ನಾನು ಸೌಮ್ಯ ಸ್ವಭಾವದವನು. ಅಧಿಕಾರಿಗಳಿಗೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳಿಗೆ ತಾಕೀತು ಮಾಡುವ ಅಭಿವ್ಯಕ್ತಿ ಸ್ವಾತಂತ್ರ್ಯ ನನಗೂ ಇದೆ. ನನ್ನ ಬಗ್ಗೆ ಅಪಪ್ರಚಾರ ಮಾಡಬೇಡಿ ನಮಗೆ ಸಲಹೆ ಸೂಚನೆ ನೀಡಬೇಕು ಎಂದರು.

ತಹಶೀಲ್ದಾರ್ ಸಯ್ಯದ್ ಖಲೀಮ್ ಉಲ್ಲಾ ಮಾತನಾಡಿ, ಶಾಸಕರ ನಿರ್ದೇಶನದಂತೆ ಸರ್ಕಾರದ ಆದೇಶಗಳನ್ನು ಅಧಿಕಾರಿಗಳು ಪಾಲಿಸಬೇಕು.ನಿಗದಿತ ಅವಧಿಯಲ್ಲಿ ಸೌಲಭ್ಯಗಳನ್ನು ಸಮರ್ಪಕ ವಾಗಿ ಒದಗಿಸಲು ಮುಂದಾಗಬೇಕು ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಮಹಾವೀರ ಸಜ್ಜನ್ ಮಾತನಾಡಿ, ನಿಗಮದಿಂದ ಮಹಿಳಾ ಉದ್ಯಮಶೀಲತೆಗೆ 2 ಲಕ್ಷ ಸಾಲ ಸೌಲಭ್ಯ ಸಾರಥಿ ಯೋಜನೆ, ಎಂಸಿಎಫ್ 2.5 ಲಕ್ಷ ಗಂಗಾಕಲ್ಯಾಣ ಯೋಜನೆಯಡಿ. 3.5 ಲಕ್ಷ ವೆಚ್ಚ ಭರಿಸಲಿದೆ. ಭೂ ಒಡೆತನ ಯೋಜನೆಯಡಿ 20 ಲಕ್ಷ ವೆಚ್ಚದಲ್ಲಿ 1ಎಕರೆ 10 ಲಕ್ಷ ಸಬ್ಸಿಡಿ ಇದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಬಿ. ಮಹೇಶ್ವರಪ್ಪ, ಪಿಎಸ್ ಐ ಸಾಗರ್, ಅಹ್ಮದ್ ಅಲಿ, ಟಿಡಿಓ ನಾಗೇಂದ್ರಪ್ಪ,ಸೇರಿದಂತೆ ಇತರರು ಇದ್ದರು.

# ಬಿಜೆಪಿ ಜೊತೆ ಜೆಡಿಎಸ್ ಮೈತ್ರಿಗೆ ಸಹಮತ ವ್ಯಕ್ತಪಡಿಸಿಲ್ಲ : ವಿಜಯನ್

ತಿರುವನಂತಪುರಂ, ಅ. 20 – ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲು ಜೆ.ಡಿ.ಎಸ್.ಗೆ ಸಹಮತ ವ್ಯಕ್ತಪಡಿಸಿರಲಿಲ್ಲ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲು ಸಿಪಿಐ (ಎಂ) ಹಿರಿಯ ನಾಯಕ ವಿಜಯನ್ ಬೆಂಬಲಿಸಿದ್ದಾರೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ದೇವೇಗೌಡ ಹೇಳಿದ್ದು ಕೇರಳ ರಾಜಕೀಯದಲ್ಲಿ ಸಂಚಲನಕ್ಕೆ ಕಾರಣವಾಗಿತ್ತು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ವಿಜಯನ್, ದೇವೇಗೌಡರ ಹೇಳಿಕೆಗಳು ಆಧಾರ ರಹಿತ ಹಾಗೂ ಇದರಲ್ಲಿ ಯಾವುದೇ ಸತ್ಯವಿಲ್ಲ ಎಂದಿದ್ದಾರೆ.

ದೇವೇಗೌಡರು ಬಿಜೆಪಿ ಜೊತೆ ಕೈ ಜೋಡಿಸಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. 2006ರಲ್ಲೂ ಅವರು ಬಿಜೆಪಿ ಜೊತೆ ಕೈ ಜೋಡಿಸಿದ್ದರು. ಪುತ್ರನಿಗೆ ಅಧಿಕಾರ ಸಿಗಬೇಕೆಂಬ ಕಾರಣಕ್ಕೆ ಅವರು ತತ್ವ, ಸಿದ್ಧಾಂತ ಬಿಟ್ಟಿದ್ದರು ಎಂದು ವಿಜಯನ್ ಟೀಕಿಸಿದ್ದಾರೆ.

# ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಗ್ರ್ಯಾಜುಯೇಷನ್ ಡೇ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಗ್ರ್ಯಾಜುಯೇಷನ್ ಡೇ ಸಮಾರಂಭವು ಕಾಲೇಜಿನ ಆವರಣದಲ್ಲಿ ಇಂದು ನಡೆಯಲಿದೆ. ದಾವಣಗೆರೆ ವಿವಿ ಕುಲಪತಿ ಡಾ. ಬಿ.ಡಿ. ಕುಂಬಾರ್, ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ರಿಜಿಸ್ಟ್ರಾರ್ ಡಾ. ಬಿ.ಇ. ರಂಗಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಾಂಶುಪಾಲ ಡಾ. ಗಣೇಶ್ ಡಿ.ಬಿ. ತಿಳಿಸಿದರು.

# ಎಟಿಎಂ ಸರ್ಕಾರದ ಕಲೆಕ್ಷನ್ ವಂಶಾವಳಿ ಪೋಸ್ಟರ್ ಬಿಡುಗಡೆ ಮಾಡಿ ಬಿಜೆಪಿ ತರಾಟೆ

ಬೆಂಗಳೂರು, ಅ. 20 -ಮುಂಬರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಆರೋಪಿಸಿರುವ ಬಿಜೆಪಿ, 'ಎ.ಟಿ.ಎಂ. ಸರ್ಕಾರದ ಕಲೆಕ್ಷನ್ ವಂಶಾವಳಿ'ಎಂಬ ಪೋಸ್ಟರ್ ಬಿಡುಗಡೆ ಮಾಡಿದೆ.

ಪೋಸ್ಟರ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಪುತ್ರ ಯತೀಂದ್ರ, ಸಚಿವ ಭೈರತಿ ಸತೀಶ್ ಹಾಗೂ ಗುತ್ತಿಗೆದಾರ ಅಂಬಿಕಾಪತಿ ಅವರ ಚಿತ್ರಗಳಿವೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಕಳೆದ ಐದು ತಿಂಗಳಲ್ಲಿ ಆಡಳಿತ ಹೇಗೆ ನಡೆದಿದೆ ಎಂಬುದು ಜನರಿಗೆ ಈಗ ಗೊತ್ತಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳು ನಿಂತಿವೆ. ರಸ್ತೆಯಲ್ಲಿನ ಒಂದು ಗುಂಡಿ ಮುಚ್ಚಲೂ ಸಾಧ್ಯವಾಗಿಲ್ಲ ಎಂದರು.

ಕರ್ನಾಟಕದಿಂದ ಹಣದ ಕಲೆಕ್ಷನ್‌ಗೆ ದೆಹಲಿಯೇ ಕೇಂದ್ರ ಬಿಂದು. ರಾಹುಲ್‌ಗಾಂಧಿ ಇದರ ಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ.

ಕಲೆಕ್ಷನ್ ಮಾಡಿದ್ದನ್ನು ರಾಹುಲ್‌ಗೆ ಒಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಧ್ಯೆ ಪೈಪೋಟಿ ಏರ್ಪಟ್ಟಿದೆ ಎಂದು ಸದಾನಂದಗೌಡ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲೆಕ್ಷನ್‌ಗಾಗಿ ಸ್ಪರ್ಧೆಗೆ ಇಳಿದಿದ್ದಾರೆ. ಇದು ಗಂಭೀರ ಮತ್ತು ಶೋಚನೀಯ ವಿಚಾರ ಎಂದರು.

ಆದಾಯ ತೆರಿಗೆ ಇಲಾಖೆಯಿಂದ ಮಾತ್ರ ಇದರ ತನಿಖೆ ನಡೆದರೆ ಸಾಲದು. ಇದರ ಬೇರು ಆಳವಾಗಿದೆ. ಕ್ರಿಮಿನಲ್ ಉದ್ದೇಶವನ್ನು ಬಯಲಿಗೆಳೆಯಲು ಸಿಬಿಐ ತನಿಖೆ ಅನಿವಾರ್ಯ. ಇದು ಖಜಾನೆ ಲೂಟಿಯ ವ್ಯವಸ್ಥೆಯಾಗಿದ್ದು, ಇದನ್ನು ಸಿದ್ದರಾಮಯ್ಯ ಅವರು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದೂ ಸದಾನಂದಗೌಡ ಒತ್ತಾಯಿಸಿದರು.

ರಾಜ್ಯದ ಎಲ್ಲ ಕಡೆಗಳಲ್ಲಿ ಕಾಂಗ್ರೆಸ್ ಭ್ರಷ್ಟಾಚಾರ ಪರಿಚಯಿಸುವ ಪೋಸ್ಟರ್ ಅಂಟಿಸುವ ಕಾರ್ಯ ನಡೆಯಲಿದೆ. ಇದು ಟ್ರೈಲರ್ ಅಷ್ಟೇ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿದರು.


**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಪಿ.ಜೆ. ಬಡಾವಣೆ ಪಶ್ಚಿಮ 80x80 + 30x40 (3 floor Building) MCC 'A' Block ಪೂರ್ವ-ದಕ್ಷಿಣ ಕಾರ್ನರ್ 44x60.
ಐಗೂರು ವಿಜಯಕುಮಾರ
99457 02495

**ಕಾರ್ನರ್ ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಪೂರ್ವ-ಉತ್ತರ 40x50 (60 ಅಡಿ ರಸ್ತೆ) ಪೂರ್ವ-ದಕ್ಷಿಣ 40x65 ಪಶ್ಚಿಮ-ದಕ್ಷಿಣ 40x70, ಶಿವ-ಪಾರ್ವತಿ ಬಡಾವಣೆ ಪೂರ್ವ-ದಕ್ಷಿಣ ( 4000 ಅಡಿ ) (60 ಅಡಿ ರಸ್ತೆ ) ಪೂರ್ವ-ಉತ್ತರ 55x65.
ಐಗೂರು ವಿಜಯಕುಮಾರ
99457 02495

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಿಕೊಡಲಾಗುವುದು.
99863 61250, 80730 24690

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಕ್ಷಿಣ ಭಾರತದ 8 ದಿನಗಳ ಸುಖಕರ ಪ್ರವಾಸ, ಶಿವಕಂಚಿ, ವಿಷ್ಣುಕಂಚಿ, ಮಹಾಬಲಿಪುರ, ಪಾಂಡಿಚೇರಿ ಕುಂಭಕೋಣಂ, ಚಿದಂಬರಂ, ತಂಜಾವೂರು, ಶ್ರೀರಂಗಂ, ರಾಮೇಶ್ವರ, ಕನ್ಯಾಕುಮಾರಿ, ಮಧುರೈ, ತ್ರಿಪುರಾಕೋದ್ರಂ, ಪಳನಿ, ಮೈಸೂರು ತಿರುಚಂದೂರು
ದಿನಾಂಕ : 26.10.2023ರ ಗುರುವಾರ ರಾತ್ರಿ 10 ಗಂಟೆಗೆ ಬಕ್ಕೇಶ್ವರ ಶಾಲೆ ಹತ್ತಿರ, ಸ್ವಾಮಿ ಅಯ್ಯಪ್ಪ ದೇವಸ್ಥಾನದಿಂದ ಹೊರಡುವುದು.
94485 33928, 99800 32271

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆಗಳು ಬಾಡಿಗೆಗೆ ಇವೆ**
ಶ್ರೀನಿವಾಸ ನಗರ 10ನೇ ಕ್ರಾಸ್, 2ನೇ ಮಹಡಿಯಲ್ಲಿ 1BHK, 10x30, 10x30 ಎರಡು ಸೀಟಿನ ಮನೆ ಮಾರಾಟಕ್ಕಿವೆ. ದೇವರಾಜ ಸೊಸೈಟಿ ಹತ್ತಿರ, ಲೆನಿನ್ ನಗರ, ದಾವಣಗೆರೆ.
98800 68009

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
88616 89590

**EC / ಇಸಿ,**
E-swathu, Khatha Change Building Licence & Property Documents, Loans-All banks
96118-66449

**ಸೈಟು ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿ ಹತ್ತಿರ 30x50 ಅಳತೆಯ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ.
98444-73119, 96329-64444

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician ಬೇಕಾಗಿದ್ದಾರೆ. ಸಂಬಳ +ಇನ್ಸೆಂಟಿವ್ಸ್ ನೀಡುತ್ತೇವೆ. ಸಿಸ್ಟಂ ವರ್ಕ್‌ಗೆ ಲೇಡಿ ಬೇಕಾಗಿದ್ದಾರೆ.
98805 31599

**ಜಮೀನು ಬೇಕಾಗಿದೆ**
ದಾವಣಗೆರೆಯ ಸುತ್ತ-ಮುತ್ತ 20 ರಿಂದ 30 ಕಿ.ಮೀ. ಒಳಗೆ ಜಮೀನು ಬೇಕಾಗಿದೆ ಹಾಗೂ ಜಮೀನಿನ ಮೇಲೆ ಯಾವುದೇ ತಂಟೆ, ತಕರಾರು, ಕೇಸ್, ವೈಯಕ್ತಿಕ ಸಮಸ್ಯೆ ಇರಬಾರದು. ಎಲ್ಲಾ ದಾಖಲೆಗಳನ್ನು ಹೊಂದಿರಬೇಕು. ಮಾರಲು ಇಚ್ಛೆ ಇರುವವರು ಕರೆ ಮಾಡಿ.
99806 67339

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
S.V. MARKETING DAVANGERE
P.B. Road, (Harihara Road)
ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
94480 46571, 78993 37571

**WANTED TEACHERS**
B.Sc/ M.Sc with good English Communication skill (Only Ladies)
Tatva Pre School Davanagere.
99641-10736

**TO LET**
2 BHK House for Lease Doggalli Compound, Near LIC Office, K.R. Road, Davangere.
94483 76399

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್. ಮೇಕಪ್ ಕಲಿಕೆಗೆ ಪ್ರಾಡಕ್ಟ್ಸ್ ಗಳನ್ನು ಕೊಡಲಾಗುತ್ತದೆ, ಎರಡು portfolio ಫೋಟೋ ಶೂಟ್ ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio Girija make up artist
9481776305

**GOLDEN OPPORTUNITY**
Exclusively for the Retired/ Home Makers / Businessmen from Top MNC part time/full time Flexible Timing, No. Investment. Age 27 above, Fixed Payout, huge incentives, PF, ESI, International Travel, Reward and recognition.
63632 34430

**ಸೈಟ್ ಮಾರಾಟಕ್ಕೆ**
ನಿಟ್ಟುವಳ್ಳಿ ವಿಭಾಗ ಸರಸ್ವತಿ ಬಡಾವಣೆ ಶ್ರೀ ದುರ್ಗಾಂಬಿಕಾ ಹೈಸ್ಕೂಲ್ ರಸ್ತೆಯಲ್ಲಿ 35x45 ಅಳತೆಯ ಸೈಟ್ ಮಾರಾಟಕ್ಕೆ ಇದೆ.
ಸಂಪರ್ಕಿಸಿ.
93532 88317

**ಬಾಡಿಗೆಗೆ ಇದೆ**
ರೆಡಿ ಡಾಬಾ ಬಾಡಿಗೆಗೆ ಇದೆ.
90080 60660

**ಬೇಕಾಗಿದ್ದಾರೆ**
SSLC / PUC / ITI / DIPLOMA ಪಾಸ್ / ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಜ್ಯೋತಿ ಮೆಟಲ್ಸ್ ಹಳೇ ಬಸ್ಟ್ಯಾಂಡ್.ಪಿ.ಬಿ.ರಸ್ತೆ, ಗಣಪತಿ ಗುಡಿ ಪಕ್ಕ, ದಾವಣಗೆರೆ.
98800 34643

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿನ ಕೆಲಸ
ಆಯಾ ಕೆಲಸ - 01
ಅಡುಗೆ ಕೆಲಸ 01
ನೇರ ಸಂದರ್ಶನಕ್ಕೆ ಸಂಪರ್ಕಿಸಿ.
86186 42929, 08192 252228

**ಮನೆ ಬಾಡಿಗೆಗೆ ಇದೆ**
ಸಾಯಿಬಾಬಾ ದೇವಸ್ಥಾನ ಹಿಂಭಾಗ ಎಂ.ಸಿ.ಸಿ. ಎ ಬ್ಲಾಕ್, (ಪೂರ್ವ) 3BHK (ಪೂರ್ವ) 3BHK (ರೂ.7500) (ಸಸ್ಯಾಹಾರಿಗಳಿಗೆ ಮಾತ್ರ) Veg Only
70196 18397

**ಬೇಕಾಗಿದ್ದಾರೆ**
ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್ ಕಿರಾಣಿ ಅಂಗಡಿಗೆ ಅನುಭವ ಉಳ್ಳವರು ಕೆಲಸಕ್ಕೆ ಬೇಕು. ಸರ್ಕಾರಿ ITI ಕಾಲೇಜ್, 60 ಅಡಿ ರಸ್ತೆ, ರಾಮಣ್ಣನ ತೋಟ ನಿಟ್ಟುವಳ್ಳಿ.
95919 21004, 7338100402

**ಬೇಕಾಗಿದ್ದಾರೆ**
ಸೇಲ್ಸ್ ಮತ್ತು ಬಿಲ್ಲಿಂಗ್ ಮಾಡಲು 2 ಹುಡುಗರು ಬೇಕಾಗಿದ್ದಾರೆ.
ಬೋಳಾಸ್ ಫ್ಯಾಕ್ಟರಿ ಔಟ್‌ಲೆಟ್ ಡ್ರೈಫ್ರೂಟ್ಸ್ & ನಟ್ಸ್
ಮೆದಾ ಸ್ಕ್ವಯರ್ ಹತ್ತಿರ, ವಿದ್ಯಾರ್ಥಿ ಭವನ, ಹದಡಿ ರಸ್ತೆ, ದಾವಣಗೆರೆ.
99007 08999

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
98442-94446

**ಗ್ಯಾಸ್ ಗೀಜರ್**
Fully Automatic 2990.- Rs.
R.O. +uv ವಾಟರ್ ಫಿಲ್ಟರ್, 4990/-
ಸೇಲ್ಸ್ ಸರ್ವೀಸ್‌ಗಾಗಿ ಸಂಪರ್ಕಿಸಿ.
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಸೇಲ್ಸ್ ಮತ್ತು ಮ್ಯಾನೇಜ್‌ಮೆಂಟ್ ಕೆಲಸ ಖಾಲಿ ಇದೆ. ಸಂಪರ್ಕಿಸಿ :
74066 59695
94499 98238

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಕೊಮಾರನಹಳ್ಳಿಯಲ್ಲಿ ಜಮೀನು ಮಾರಾಟಕ್ಕಿದೆ**
ಕೊಮಾರನಹಳ್ಳಿ ಕೆರೆಗೆ (ಮಲೇಬೆನ್ನೂರು ಹತ್ತಿರ) ಹೊಂದಿಕೊಂಡಂತೆ 3 ಎಕರೆ 6 ಗುಂಟೆ ಬೋರ್‌ವೆಲ್ ಇರುವ 4 ವರ್ಷದ ಅಡಿಕೆ ತೋಟದ ಜಮೀನು ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
99866 94920, 70907 43891

**TO LET - RENT ONLY**
2 BHK - East facing, First floor, Main road, Swami Vivekananda Badavane, 7th main, 5th Cross, Single house in First floor With Western & Indian toilet. Rent Only, No lease.
M : 94482 01483

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ, 30x40 ಪೂರ್ವ, 36x60 ಪೂರ್ವ-ದಕ್ಷಿಣ ಕಾರ್ನರ್ ಮನೆ ಮಾರಾಟಕ್ಕಿದೆ. 30x40 ಪಶ್ಚಿಮ, ಎಸ್. ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43, ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ.
- ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**SRI SANJEEVINI INSTITUTE OF NURSING SCIENCE**
ADMISSIONS OPEN
1. B.Sc., Nursing
2. B.Sc., MLT
(PUC Science Pass)
Anajaneya Badavane, Davangere.
08192 220611
97430 73102

**ಹೆಸರು ಸ್ಪಷ್ಟೀಕರಣ**
ಶ್ರೀ ಯಮುನಪ್ಪ ಕೆ. ಈಟಿ ತಂದೆ ಕನಕಪ್ಪ ಈಟಿ, 44 ವರ್ಷ, ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿಯಾದ ನಾನು ಆಹಾರ ಪಡಿತರ ಚೀಟಿಯಲ್ಲಿ ಯಮುನಪ್ಪ ಕೆ.ಇ. ಎಂದಿದ್ದು, ಐಡಿ ಕಾರ್ಡ್‌ನಲ್ಲಿ ಯಮುನಪ್ಪ ಕೆ., ಆಧಾರ್ ಕಾರ್ಡ್‌ನಲ್ಲಿ ಯಮುನಪ್ಪ ಕೆ.ಇ. ಹಾಗೂ ಪಾನ್ ಕಾರ್ಡ್‌ನಲ್ಲಿ ಕೆ. ಯಮುನಪ್ಪ ಎಂದಾಗಿರುತ್ತದೆ. ಈ ಎಲ್ಲಾ ಹೆಸರುಗಳು ನನ್ನವೇ ಆಗಿದ್ದು, ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳಲ್ಲೂ, ದಾಖಲಾತಿಗಳನ್ನು ಯಮುನಪ್ಪ ಕೆ. ಈಟಿ ತಂದೆ ಕನಕಪ್ಪ ಈಟಿ ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿನಾಂಕ : 20.10.2023ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣ ಮಾಡಿದ್ದೇನೆ.
ಸಹಿ/- ಯಮುನಪ್ಪ ಕೆ. ಈಟಿ

**ಉಷಾ ಟ್ರೇಡಿಂಗ್ ಕಂಪನಿ**

ಅಧಿಕೃತ ಮಾರಾಟಗಾರರು
ಡರ್ಬಿ ಹೊಲಿಗೆ ಯಂತ್ರಗಳು ಮತ್ತು ಬಿಡಿ ಭಾಗಗಳು. ಮಂಡಿಪೇಟೆ, ಗೂಡ್ ಶೆಡ್ ರಸ್ತೆ, ದಾವಣಗೆರೆ-1. ಎಲ್ಲಾ ಕಂಪನಿಗಳ ಹೊಲಿಗೆ ಯಂತ್ರಗಳ ಮಾರಾಟ ಹಾಗೂ ರಿಪೇರಿ ಮಾಡಲಾಗುವುದು.
94484 49617, 94805 00808

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ.
30x46 ಉತ್ತರ,
30x46 ದಕ್ಷಿಣ
Rs. 2000/- per sq ft.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

**WANTED**
Sales Executives
Female only.
2 Years Experience.
Sri Lakshmi Venkateshwara Granites & Marbles
# 2002/1 to 2002/7, Taralabalu Extn., Hadadi Main Road, Davangere-577004.
E-mail : slvgmdvg2010@gmail.com
90086-60111

**ಬೇಕಾಗಿದ್ದಾರೆ**
ಚಿಟ್ಸ್ ಕಂಪನಿಯಲ್ಲಿ 3 ರಿಂದ 4 ವರ್ಷ ಅನುಭವವುಳ್ಳ ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ.
ನಿತ್ಯಚೇತನಾ ಚಿಟ್ಸ್ ಪ್ರೈ. ಲಿ.,
ಎಸ್.ಐ. ಆರ್ಕೇಡ್, 1ನೇ ಮಹಡಿ, ಡೆಂಟಲ್ ಕಾಲೇಜ್ ರೋಡ್, ಯುಬಿಡಿಟಿ ಕಾಲೇಜು ಎದುರು, ದಾವಣಗೆರೆ.
96114-70793, 97422-70483

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ಕುಡಿತ ಬಿಡುವುದರಿಂದ ಕುಟುಂಬಕ್ಕೆ ಇನ್ನಿಲ್ಲದ ಆನಂದ



ಮಲೇಬೆನ್ನೂರು, ಅ.20- ಮದ್ಯವರ್ಜನೆ ಶಿಬಿರದ ಯಶಸ್ಸಿಗೆ ಶ್ರಮಿಸಿದವರ ಶ್ರಮ ಸಾರ್ಥಕವಾಗಬೇಕಾದರೆ, ಇಲ್ಲಿ ಬಂದಿರುವ 60 ಶಿಬಿರಾರ್ಥಿಗಳು ಇನ್ನೆಂದೂ ದುಶ್ಚಟಗಳ ಕಡೆಗೆ ತಿರುಗಿಯೂ ನೋಡಬಾರದೆಂದು 1745ನೇ ಮದ್ಯವರ್ಜನೆ ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಟಿ.ಎಸ್.ಸೋಮಶೇಖರ್ ಮನವಿ ಮಾಡಿದರು.

ಕೊಲಂಬಿಯ ಶ್ರೀ ಗುರು ಗದ್ದಿಗೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿರುವ 1745ನೇ ಮದ್ಯವರ್ಜನೆ ಶಿಬಿರದ 7ನೇ ದಿನವಾದ ಶುಕ್ರವಾರ ಸಂಜೆ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದುಶ್ಚಟಗಳಿಗೆ ಒಳಗಾಗಿ ಬದುಕನ್ನು ಹಾಳು ಮಾಡಿಕೊಂಡಿರುವ ಜನರನ್ನು ಅವುಗಳಿಂದ ಮುಕ್ತಿಗೊಳಿಸಿ, ಹೊಸ ಜೀವನಕ್ಕೆ ಕರೆತರುವ ಡಾ. ವೀರೇಂದ್ರ ಹೆಗ್ಗಡೆ ಅವರ ಈ ಪ್ರಯತ್ನ ನಿಜಕ್ಕೂ ಮಾದರಿ ಎಂದು ಶ್ಲಾಘಿಸಿದರು.

ಶಿಬಿರದ ಗೌರವಾಧ್ಯಕ್ಷ ಜಿ.ಶಂಕರಮೂರ್ತಿ ಮಾತನಾಡಿ, ಸಮಾಜದಲ್ಲಿ ಕುಡುಕ ಎಂಬ ಅಣೆಪಟ್ಟಿ ಕಟ್ಟಿಕೊಂಡು ಬದುಕುವುದು ಎಷ್ಟು ಕಷ್ಟ ಎಂಬುದು ಅನುಭವಿಸಿದವರಿಗೆ ಮಾತ್ರ ಗೊತ್ತಿದೆ. ಆ ಹಣೆಪಟ್ಟಿ ತೆಗೆದು ಹಾಕಿ, ಸಮಾಜದ ನಿಮ್ಮ ಗೌರವ ಉಳಿಸಿಕೊಂಡು ಕುಡಿತದಿಂದ ಹೊರಬರುವುದು ಅನಿವಾರ್ಯ ಎಂದರು.

ಇತ್ತೀಚೆಗೆ ಕೊಮಾರನಹಳ್ಳಿಯಲ್ಲಿ ಜರುಗಿದ 1705ನೇ ಮದ್ಯವರ್ಜನೆ ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಟಿ.ಮಂಜುನಾಥ್ ಪಟೇಲ್ ಮಾತನಾಡಿ, ನೀವು ಕುಡಿತ ಬಿಡುವುದರಿಂದ ನಿಮ್ಮ ಆರೋಗ್ಯ ಹಾಗೂ ಸಮಾಜದಲ್ಲಿ ನಿಮ್ಮನ್ನು ನೋಡುವ ದೃಷ್ಟಿಕೋನ ಬೇರೆ ಆಗುವುದರ ಜೊತೆಗೆ ನಿಮ್ಮ ಕುಟುಂಬದವರಲ್ಲಿ ಇನ್ನಿಲ್ಲದ ಆನಂದ ಉಂಟಾಗುತ್ತದೆ ಎಂದರು.

ಶಿಬಿರಾಧಿಕಾರಿ ದೇವಿಪ್ರಸಾದ್ ಸುವರ್ಣ ಮಾತನಾಡಿ, ಇಷ್ಟು ಚಿಕ್ಕ ವಯಸ್ಸಿನ ಮಕ್ಕಳು ದುಶ್ಚಟಗಳಿಗೆ ಒಳಗಾಗಿರುವುದನ್ನು ನೋಡಿ ತುಂಬಾ ದುಃಖವಾಗುತ್ತದೆ ಎಂದು ಕಣ್ಣೀರು ಹಾಕಿದರು.

ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಕುಲಾಲ್, ಬಸವಾಪಟ್ಟಣ ಯೋಜನಾಧಿಕಾರಿ ಎನ್.ನವೀನ್, ಕುಂದೂರು ವಲಯ ಮೇಲ್ವಿಚಾರಕಿ ಶ್ರೀಮತಿ ಪಲ್ಲವಿ, ಸಹಶಿಬಿರಾಧಿಕಾರಿ ರುದ್ರಪ್ಪ, ಆರೋಗ್ಯ ಸಹಾಯಕಿ ಶ್ರೀಮತಿ ನೇತ್ರಾವತಿ ಮಾತನಾಡಿದರು.

ಶ್ರೀ ಗುರು ಗದ್ದಿಗೇಶ್ವರ ಕಮಿಟಿ ಕಾರ್ಯದರ್ಶಿ ವೈ.ಎಂ.ಬಸವಲಿಂಗಪ್ಪ, ಗ್ರಾ.ಪಂ. ಅಧ್ಯಕ್ಷ ಕೆ.ಜೆ.ರೇವಣಸಿದ್ದಪ್ಪ, ಶಿವಮೊಗ್ಗ ಹಾಲು ಒಕ್ಕೂಟದ ನಿರ್ದೇಶಕ ಜಿ.ಹೆಚ್. ಹೇಮಂತ್‌ರಾಜ್, ಗ್ರಾಮದ ಮುಖಂಡ ಕೆ.ಬಿ. ಬಸವರಾಜಪ್ಪ, ರೈಸ್ ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಜಿ.ಬಿ.ಯೋಗೇಶ್, ಜಿಗಳಿ ಪ್ರಕಾಶ್, ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಕೊಲಂಬಿ ಒಕ್ಕೂಟದ ಅಧ್ಯಕ್ಷ ಗದಿಗೇಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

**ಸಮಾರೋಪ :** ಮದ್ಯವರ್ಜನೆ ಶಿಬಿರದ ಸಮಾರೋಪ ಸಮಾರಂಭವು ದಿನಾಂಕ 21ರ ಶನಿವಾರ ಬೆಳಿಗ್ಗೆ 11.30ಕ್ಕೆ ಸಾಣೇಹಳ್ಳಿ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಲಿದೆ.

# ಪಂಪ್‌ಸೆಟ್ ಗಣತಿ : ರೈತರು- ಬೆಸ್ಕಾಂ ಸಭೆಯಲ್ಲಿ ತೀರ್ಮಾನ



ದಾವಣಗೆರೆ, ಅ. 20- ಗುಣಮಟ್ಟದ ಮತ್ತು ಸಮರ್ಪಕ ವಿದ್ಯುತ್ ಪೂರೈಕೆ ಮಾಡುವ ಸಲುವಾಗಿ ಅನಧಿಕೃತ ಹಾಗೂ ಅಧಿಕೃತ ಪಂಪ್‌ಸೆಟ್‌ಗಳ ಗಣತಿಗೆ ರೈತರು- ಬೆಸ್ಕಾಂ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ನಿರಂತರ ಮೂರು ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಅನಿಯಮಿತ ಲೋಡ್ ಶೆಡ್ಡಿಂಗ್‌ನಿಂದ ರೈತರು ರೋಸಿ ಹೋಗಿದ್ದು, ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬೇಕು. ವಿದ್ಯುತ್ ಪರಿವರ್ತಕಗಳ ದುರಸ್ತಿ ಹಾಗೂ ಬದಲಾವಣೆ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸ ಬಾರದು ಎಂದು ರೈತರು ಆಗ್ರಹಿಸಿದರು.


ರೈತರ ಪ್ರಶ್ನೆಗಳಿಗೆ ಉತ್ತರಿಸಿದ ಕಾರ್ಯಪಾಲಕ ಇಂಜಿನಿಯರ್ ಎಸ್.ಕೆ. ಪಟೇಲ್ ಅವರು, ಐದು ಗಂಟೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತೇವೆ. ಆದರೆ ಅನಧಿಕೃತ ಪಂಪ್‌ಸೆಟ್ ಗಳ ಮಾಹಿತಿ ಬೇಕು. ನಮ್ಮ ದಾಖಲೆಗಳಲ್ಲಿ ಇರುವುದಕ್ಕೂ ವಾಸ್ತವತೆಗೂ ವ್ಯತ್ಯಾಸವಿದೆ. ಹೀಗಾಗಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿಲ್ಲ ಎಂದರು.

ರೈತರು ಸಹಕರಿಸಿದರೆ ಬೆಸ್ಕಾಂ ಕಚೇರಿ ವ್ಯಾಪ್ತಿಯ ದಾವಣಗೆರೆ, ಜಗಳೂರು, ಚನ್ನಗಿರಿ ತಾಲ್ಲೂಕುಗಳ ಎಲ್ಲಾ ಪಂಪ್‌ಸೆಟ್‌ಗಳ ಸರ್ವೆ ನಡೆಸಿ, ಗಣತಿ ಕೈಗೊಳ್ಳಬೇಕು. ಆಗ ಮಾತ್ರ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದಾಗ, ಇದಕ್ಕೆ ಪ್ರತಿಕ್ರಿಯಿಸಿದ ರೈತರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

ಈಗಿನ ಪರಿಸ್ಥಿತಿಯಲ್ಲಿ ಪ್ರತಿದಿನ 7 ಗಂಟೆ 3 ಫೇಸ್ ವಿದ್ಯುತ್ ಕೊಡಲು ಸಾಧ್ಯವಿಲ್ಲ. ಬದಲಾಗಿ ಐದು ತಾಸು ಕೊಡಲಾಗುವುದು ಎಂದು ಪಟೇಲ್ ಹೇಳಿದಾಗ, ರೈತರು ಲೋಡ್ ಶೆಡ್ಡಿಂಗ್ ಇಲ್ಲದೆ ನಿರಂತರ ಮತ್ತು ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಬೇಕೆಂದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಬಿ.ಎಂ. ಸತೀಶ ಕೊಳೇನಳ್ಳಿ, ಬುಳ್ಳಾಪುರದ ಹನುಮಂತಪ್ಪ, ಬೆಳವನೂರು ನಾಗೇಶ್ವರರಾವ್, ಬಲ್ಲೂರು ಅಣ್ಣಪ್ಪ, ಎಸ್.ಟಿ. ಪರಮೇಶ್ವರಪ್ಪ, 6 ನೇ ಕಲ್ಲು ವಿಜಯಕುಮಾರ್, ಈಚಘಟ್ಟದ ಕರಿಬಸಪ್ಪ, ಕೊಗ್ಗನೂರು ಹನುಮಂತಪ್ಪ, ಚಿನ್ನಸಮುದ್ರದ ಭೀಮಾನಾಯ್ಕ ಹಾಗೂ ಬೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಎಸ್.ಕೆ. ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಿ.ಎಂ. ನಾಯಕ್, ತೀರ್ಥೇಶ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ನಾಡಿದ್ದು ಸಿದ್ಧ ಕಣ್ಣಿನ ಹನಿ



ದಾವಣಗೆರೆ, ಅ.20- ಸ್ಥಳೀಯ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇದೇ ದಿನಾಂಕ 23 ರ ಸೋಮವಾರ ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದು ದಾಂಡಿಯಾ ರಾಸ್

ರಿದ್ಧಿ ಸಿದ್ಧಿ ಫೌಂಡೇಷನ್ ಹಾಗೂ ಆರ್.ಜೆ. ಇವೆಂಟ್ಸ್ ಇವರ ಆಶ್ರಯದಲ್ಲಿ ನವರಾತ್ರಿ ದಸರಾ ಹಬ್ಬದ ಪ್ರಯುಕ್ತ 16ನೇ ವರ್ಷದ 'ದಾಂಡಿಯಾ ರಾಸ್' ಕಾರ್ಯಕ್ರಮವು ರೇಣುಕ ಮಂದಿರದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ. ಇಂದು ಸಂಜೆ 7.30 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಡಿ. ಕುಂಬಾರ, ಮಹಾಪೌರ ವಿನಾಯಕ ಪೈಲ್ವಾನ್, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ರಿದ್ಧಿ-ಸಿದ್ಧಿ ಫೌಂಡೇಷನ್ ಕಾರ್ಯದರ್ಶಿ ರಾಜು ಭಂಡಾರಿ, ಮುಖಂಡರುಗಳಾದ ಈಶ್ವರ ಸಿಂಗ್ ಕವಿತಾಳ್, ಶ್ರೀಕಾಂತ್ ಬಗರೆ, ರೋನಕ್ ಜೈನ್ ಮತ್ತಿತರರು ಆಗಮಿಸುವರು.

## ನಗರದ ಕಾಳಿಕಾದೇವಿ ದೇವಸ್ಥಾನದಲ್ಲಿ ಇಂದು ಪಂಚಾಮೃತಾಭಿಷೇಕ

ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಪಂಚಾಮೃತಾಭಿಷೇಕ, ದುರ್ಗಾಹೋಮ ಮತ್ತು ಪುಷ್ಪಾಲಂಕಾರ ಪೂಜಾ ಕಾರ್ಯಕ್ರಮಗಳು ಜರುಗುವವು.

ನವರಾತ್ರಿ ಹಬ್ಬದ ಪ್ರಯುಕ್ತ ಇಂದು ಸಂಜೆ 6 ಗಂಟೆಗೆ ಶ್ರೀ ಕಾಳಿಕಾದೇವಿ ಮಹಿಳಾ ಭಜನಾ ಮಂಡಳಿಯಿಂದ ಲಲಿತಾ ಸಹಸ್ರನಾಮ ಪಾರಾಯಣ, 7 ಗಂಟೆಗೆ ಟಿ. ಪರಮೇಶ್ವರಾಚಾರ್ ಮತ್ತು ಎನ್. ರಮೇಶಚಾರ್ ಇವರಿಂದ ಶ್ರೀ ದೇವಿಯ ಪಾರಾಯಣವನ್ನು ಏರ್ಪಡಿಸಲಾಗಿದೆ. ನಂತರ ಶ್ರೀ ದೇವಿಗೆ ಮಹಾಮಂಗಳಾರತಿ ಮತ್ತು ಭಕ್ತಾದಿಗಳಿಗೆ ತೀರ್ಥ, ಪ್ರಸಾದ ವಿನಿಯೋಗ ನಡೆಯುವುದು.

## ದೇವೇಗೌಡರ ಮಾತಿನಿಂದ ಕೇರಳ ರಾಜಕೀಯದಲ್ಲಿ ಸಂಚಲನ

ತಿರುವನಂತಪುರಂ, ಅ. 20 – ಕರ್ನಾಟಕದಲ್ಲಿ ಬಿಜೆಪಿ ಜೊತೆ ಕೈ ಜೋಡಿಸಲು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಹಸಿರು ನಿಶಾನೆ ತೋರಿಸಿದ್ದಾರೆ ಎಂದು ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಹೇಳಿರುವ ಮಾತು ಕೇರಳದ ರಾಜಕೀಯದಲ್ಲಿ ಸಂಚಲನಕ್ಕೆ ಕಾರಣವಾಗಿದೆ. ದೇವೇಗೌಡ ನೀಡಿರುವ ಹೇಳಿಕೆಗಳನ್ನು ಕೇರಳ ಜೆಡಿಎಸ್ ನಾಯಕ ಕೆ. ಕೃಷ್ಣನ್‌ಕುಟ್ಟಿ ಅವರು ಸ್ಪಷ್ಟವಾಗಿ ತಳ್ಳಿ ಹಾಕಿದ್ದಾರೆ.

ಬಿಜೆಪಿ ಜೊತೆ ಕೈ ಜೋಡಿಸುವುದನ್ನು ವಿರೋಧಿಸಿರುವ ಅವರು, ರಾಜ್ಯ ಘಟಕವು ಸಿಪಿಐ (ಎಂ) ನೇತೃತ್ವದ ಎಡರಂಗದ ಜೊತೆ ಮುಂದುವರೆಯಲಿದೆ ಎಂದು ಹೇಳಿದ್ದಾರೆ.

ದೇವೇಗೌಡರು ನೀಡಿರುವ ಹೇಳಿಕೆಯು ಕೇರಳದಲ್ಲಿ ಆಡಳಿತಾರೂಢ ಸಿಪಿಐ (ಎಂ) ಹಾಗೂ ಬಿಜೆಪಿ ನಡುವೆ ಒಳ ಒಪ್ಪಂದ ಇರುವುದನ್ನು ತೋರಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತಲ ಹೇಳಿದ್ದಾರೆ.

## ಕೆನಡಾದ 41 ರಾಯಭಾರಿಗಳು ವಾಪಸ್

ನವದೆಹಲಿ, ಅ. 20 – ಭಾರತದಿಂದ 41 ರಾಯಭಾರಿಗಳನ್ನು ವಾಪಸ್ ಕರೆಸಿಕೊಂಡಿರುವುದಾಗಿ ಕೆನಡಾ ತಿಳಿಸಿದೆ. ಅವರ ರಾಯಭಾರಿ ರಕ್ಷಣೆಯನ್ನು ವಾಪಸ್ ಪಡೆಯುವುದಾಗಿ ಭಾರತ ತಿಳಿಸಿದ ನಂತರ ಈ ಕ್ರಮ ತೆಗೆದುಕೊಂಡಿರುವುದಾಗಿ ಕೆನಡಾದ ವಿದೇಶಾಂಗ ವ್ಯವಹಾರಗಳ ಸಚಿವೆ ಮೆಲನೀ ಜೋಲಿ ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ, 41 ಕೆನಡಾದ ರಾಯಭಾರಿಗಳನ್ನು ವಾಪಸ್ ಕರೆಸಿಕೊಂಡಿರುವ ಕ್ರಮ ಅಂತರರಾಷ್ಟ್ರೀಯ ನಿಯಮಗಳ ಉಲ್ಲಂಘನೆಯಲ್ಲ. ಆದರೆ, ಉಲ್ಲಂಘನೆ ಎಂಬ ರೀತಿ ಬಿಂಬಿಸಲು ಕೆನಡಾ ಪ್ರಯತ್ನ ನಡೆಸಿದೆ ಎಂದು ಹೇಳಿದೆ.

ವಿಯನ್ನಾ ಒಡಂಬಡಿಕೆಯ ಅನ್ವಯ ರಾಯಭಾರಿಗಳನ್ನು ವಾಪಸ್ ಕರೆಸಿಕೊಳ್ಳಲು ತಿಳಿಸಲಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ.

ಸಿಖ್ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತ ಭಾಗಿಯಾಗಿದೆ ಎಂದು ಕೆನಡಾ ಆರೋಪಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧ ಹದಗೆಟ್ಟಿದೆ. ಕೆನಡಾದ ಆರೋಪ ಅಸಂಗತ ಹಾಗೂ ದುರುದ್ದೇಶಪೂರಿತ ಎಂದು ಭಾರತ ತಳ್ಳಿ ಹಾಕಿದೆ.

## ರಾಣೇಬೆನ್ನೂರಿನಲ್ಲಿಂದು ಶ್ರೀ ದೇವಿ ಪುರಾಣ

ರಾಣೇಬೆನ್ನೂರು : ಶ್ರೀ ಗುರು ಕಬೀರಾನಂದ ಸ್ವಾಮಿ ಸಿದ್ಧಾಶ್ರಮ, ಶ್ರೀ ಸಿದ್ಧಾರೂಢ ಮಠದಲ್ಲಿ ಶರನ್ನವರಾತ್ರಿ ಪ್ರಯುಕ್ತ ಶ್ರೀ ದೇವಿ ಪುರಾಣ ಕಾರ್ಯಕ್ರಮ ನಡೆಯುವುದು. ಸದ್ಭಕ್ತ ಶರಣ, ಶರಣೆಯರು ಕಾರ್ಯಕ್ರಮಕ್ಕೆ ಹಾಜರಾಗಿ ಜೀವನ್ಮುಕ್ತಿಯ ವಿಷಯ ತಿಳಿದುಕೊಳ್ಳಲು ಭಕ್ತರಲ್ಲಿ ವಿನಂತಿಸಲಾಗಿದೆ.

## ನಿಟುವಳ್ಳಿ ದುಗ್ಗಮ್ಮನ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ವಿಶೇಷ ಪೂಜೆ



ದಾವಣಗೆರೆ, ಅ.20- ನಿಟುವಳ್ಳಿ ಗ್ರಾಮ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಶುಕ್ರವಾರ ನಡೆದ ನವರಾತ್ರಿ ಉತ್ಸವದ ಪೂಜಾ ಕಾರ್ಯಕ್ರಮದಲ್ಲಿ ಎಸ್ಸೆಸ್ ಕೇರ್ ಸೆಂಟರ್ ಅಜೀವ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಭಾಗವಹಿಸಿದ್ದರು. ಮಹಾನಗರ ಪಾಲಿಕೆ ಸದಸ್ಯರುಗಳಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ, ಶ್ರೀಮತಿ ಆಶಾ ಉಮೇಶ್, ಶ್ರೀಮತಿ ಸುಧಾ ಇಟ್ಟಿಗುಡಿ, ದ್ರಾಕ್ಷಾಯಣಮ್ಮ ಮತ್ತಿತರರು ಪಾಲ್ಗೊಂಡಿದ್ದರು.

## ಅಕ್ರಮ ಡೋರ್ ನಂಬರ್ ನೀಡಿದ ಅಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯ

ದಾವಣಗೆರೆ, ಅ. 20- ಬೀಗಮುದ್ರೆ ಹಾಕಿದ್ದ ಖಾಸಗಿ ಶಾಲೆಯೊಂದನ್ನು ಅಕ್ರಮವಾಗಿ ತೆಗೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಡಿಪಿಐ ಹಾಗೂ ಬಿಇಓ ಅವರ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದೂರು ದಾಖಲಿಸಿ, ಕಾನೂನು ಹೋರಾಟ ನಡೆಸಲಾಗುವುದು ಎಂದು ಸಾಮಾಜಿಕ ಕಾರ್ಯಕರ್ತ ಎಸ್. ಶ್ರೇಯಸ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರದ ವಿಜನ್ ಇಂಟರ್ ನ್ಯಾಷನಲ್ ಶಾಲೆಗೆ ಹಾಕಲಾಗಿದ್ದ ಬೀಗಮುದ್ರೆಯನ್ನು ಅಕ್ರಮವಾಗಿ ತೆಗೆದಿದ್ದು, ಶಾಲೆ ಬಫರ್ ಜೋನ್‌ನಲ್ಲಿದ್ದರೂ ಮಹಾನಗರ ಪಾಲಿಕೆಯಿಂದ ಅಕ್ರಮವಾಗಿ ಡೋರ್ ನಂಬರ್ ಪಡೆಯಲಾಗಿದೆ. ಕಳೆದ ಹತ್ತು ವರ್ಷಗಳಿಂದ ಪರವಾನಿಗೆ ಪಡೆದಿರುವುದಿಲ್ಲ ಎಂದು ಆರೋಪಿಸಿದರು. ಶಿಕ್ಷಣ ಇಲಾಖೆಗೆ ಸಲ್ಲಿಸಿದ್ದ ದೂರಿನನ್ವಯ ಅ. 17 ರಂದು ಬೀಗಮುದ್ರೆ ಹಾಕಲಾಗಿತ್ತು. ಆದರೆ ಅ. 18 ರಂದು ಅಕ್ರಮವಾಗಿ ಬೀಗಮುದ್ರೆ ತೆಗೆಯಲಾಗಿದೆ ಎಂದು ತಿಳಿಸಿದರು. ಅಕ್ರಮವಾಗಿ ಡೋರ್ ನಂಬರ್ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮೊಕದ್ದಮೆ ಹೂಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟಿ. ಚೇತನ್, ನೌಷಿನ್ ತಾಜ್ ಉಪಸ್ಥಿತರಿದ್ದರು.

## ವಿದ್ಯಾನಗರದಲ್ಲಿ ಶ್ರೀ ದೇವಿ ಪ್ರವಚನ

ದಾವಣಗೆರೆ : ವಿದ್ಯಾನಗರದ ಶ್ರೀ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಇಂದು ಸಂಜೆ 6 ಗಂಟೆಗೆ ಅಮರಯ್ಯ ಶಾಸ್ತ್ರಿಗಳು ಹಾಗೂ ಶರಣಯ್ಯ ಗವಾಯಿಗಳಿಂದ ದೇವಿ ಪುರಾಣ ನಡೆಯುವುದು.

## ಎನ್.ಎ. ಮುರುಗೇಶ್ ಅವರಿಗೆ ಶುಭಾಶಯ



ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರನ್ನು ಕಲಾ ಪ್ರಕಾಶ ವೃಂದದಿಂದ ಸನ್ಮಾನಿಸಿ, ಗೌರವಿಸಲಾಯಿತು. ಕಲಾಪ್ರಕಾಶ ವೃಂದದ ಗೌರವ ಅಧ್ಯಕ್ಷ ರಮಣ್‌ಲಾಲ್ ಪಿ. ಸಂಘವಿ, ಗೌರವ ಪ್ರಧಾನ ಕಾರ್ಯದರ್ಶಿ ಎಸ್.ಕೆ. ವೀರಣ್ಣ, ಅಧ್ಯಕ್ಷ ಎ.ಹೆಚ್. ಕುಬೇರಪ್ಪ, ಉಪಾಧ್ಯಕ್ಷ ಹೆಚ್.ಎಸ್. ಗುರುನಾಥ್, ಪ್ರಧಾನ ಕಾರ್ಯದರ್ಶಿ ಕಿರುವಾಡಿ ವಿ. ಸೋಮಶೇಖರ್ ಅವರುಗಳು ಮುರುಗೇಶ್ ಅವರಿಗೆ ಶುಭ ಹಾರೈಸಿದರು.

## ಹಾರ್ದಿಕ ಅಭಿನಂದನೆಗಳು



ಜಿಲ್ಲಾ ಕುರುಬರ ಸಂಘದ
ಹಂಗಾಮಿ ಅಧ್ಯಕ್ಷರಾಗಿ
ಕುರುಬ ಸಮಾಜದ ಹಿರಿಯ
ಮುಖಂಡರಾದ

**ಶ್ರೀ ಬಿ.ಹೆಚ್. ಪರಶುರಾಮಪ್ಪ**

ಆಯ್ಕೆಯಾಗಿರುವ ಇವರಿಗೆ
ಹಾರ್ದಿಕ ಅಭಿನಂದನೆಗಳು...

* ಶ್ರೀ ಟಿ. ಹಾಲಪ್ಪ, ಪೊಲೀಸ್ ನಿವೃತ್ತ ಎ.ಎಸ್.ಪಿ., ದಾವಣಗೆರೆ.
* ಶ್ರೀ ಬಿ.ಹೆಚ್ ಉದಯಕುಮಾರ್, ಗುತ್ತಿಗೆದಾರರು, ದಾವಣಗೆರೆ.
* ಶ್ರೀ ಹೆಚ್.ಎಂ. ವಿಜಯ್‌ಕುಮಾರ್, ದಾವಣಗೆರೆ.
* ಶ್ರೀ ಹೆಚ್. ಅರುಣಾ, ದಾವಣಗೆರೆ.
* ಶ್ರೀ ಎಲ್.ಹೆಚ್. ತಿಪ್ಪೇಸ್ವಾಮಿ, ಮಾಜಿ ತಾಲ್ಲೂಕು, ಅಧ್ಯಕ್ಷರು, ಅಣಜಿ.
* ಶ್ರೀ ಎಲ್.ಎಸ್. ಗುಡ್ಡೇಶ್, ಗುತ್ತಿಗೆದಾರರು, ಅಣಜಿ.
* ಶ್ರೀ ಸಿದ್ದಪ್ಪ, ಆಲೂರು. * ಶ್ರೀ ಎಸ್. ರವಿ, ಲೋಕಿಕೆರೆ
* ಶ್ರೀ ಪಿ.ಟಿ. ಆನಂದ್, ಲೋಕಿಕೆರೆ.
* ಶ್ರೀ ಎಸ್. ಓಂಕಾರಪ್ಪ, ನಿವೃತ್ತ ಪೊಲೀಸ್ ಪಿಎಸ್ಐ, ದಾವಣಗೆರೆ.
* ಶ್ರೀ ಹೊನ್ನಪ್ಪರ ರಾಜು, ಬಿಳಿಚೋಡು.

## ನಗರದ ಲಯನ್ಸ್‌ನಲ್ಲಿ ಇಂದು 'ದಸರಾ ಸಂಭ್ರಮ'

ಲಯನ್ಸ್ ಕ್ಲಬ್ ವತಿಯಿಂದ ಇಂದು ಸಂಜೆ 6 ಗಂಟೆಗೆ ಲಯನ್ಸ್ ಭವನದಲ್ಲಿ 'ದಸರಾ ಸಂಭ್ರಮ' ನಡೆಯಲಿದೆ.

'ದಸರಾ ಸಂಭ್ರಮ'ದಲ್ಲಿ ದಾಂಡಿಯಾ ರಾಸ್-ಗರ್ಭಾರಾಸ್ ಹಾಗೂ ಸಂಗೀತ ಸಂಜೆ, ಸಮೂಹ ನೃತ್ಯ ಕೋಲಾಟ, ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯುವವು.

ಅಧ್ಯಕ್ಷತೆಯನ್ನು ಕ್ಲಬ್ಬಿನ ಅಧ್ಯಕ್ಷ ನೀಲಿ ಉಮೇಶ್ ವಹಿಸುವರು. ಮುಖ್ಯ ಅತಿಥಿಗಳಾಗಿ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ, ವಲಯಾಧ್ಯಕ್ಷ ಎನ್.ಆರ್. ನಾಗಭೂಷಣರಾವ್ ಭಾಗವಹಿಸುವರು.



## ಕರಾಟೆ : ಲಕ್ಷ್ಮೀಬಾಯಿ ರಾಜ್ಯಮಟ್ಟಕ್ಕೆ

ದಾವಣಗೆರೆ, ಅ. 20- ಮಹಾನಗರ ಪಾಲಿಕೆಯ 21ನೇ ವಾರ್ಡ್ ಬಸಾಪುರದ ಸರ್ಕಾರಿ ಪ್ರಾಥಮಿಕ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ ಕು. ಲಕ್ಷ್ಮೀಬಾಯಿ ಕರಾಟೆಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟದ ಸ್ಪರ್ಧೆಗೆ ಆ ಯ್ಕೆಯಾಗಿದ್ದಾರೆ. ವಿದ್ಯಾರ್ಥಿನಿಗೆ ಶಾಲಾಭಿವೃದ್ಧಿ ಸಮಿತಿ ಹಾಗೂ ಶಿಕ್ಷಕವೃಂದ ಅಭಿನಂದಿಸಿದೆ.

## ಹಾವೇರಿಗೆ ಇಂದು ಸಚಿವ ಎಸ್ಸೆಸ್ಸೆಂ



ಬರುವ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಚುನಾಯಿತ ಪ್ರತಿನಿಧಿಗಳ ಮತ್ತು ಕಾರ್ಯಕರ್ತರ ಸಭೆಯು ಹಾವೇರಿಯಲ್ಲಿ ಇಂದು ಸಂಜೆ 4 ಗಂಟೆಗೆ ನಡೆಯಲಿದೆ.

ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಹಾವೇರಿ ಜಿಲ್ಲೆಯ ಕಾಂಗ್ರೆಸ್ ವೀಕ್ಷಕ ಶಾಮನೂರು ಮಲ್ಲಿಕಾರ್ಜುನ್ ಅವರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ಜೊಮ್ಯಾಟೋ ಷೇರು ಮಾರಿದ ಸಾಫ್ಟ್‌ಬ್ಯಾಂಕ್

ನವದೆಹಲಿ, ಅ. 20 – ಜಪಾನ್‌ನ ಸಮೂಹವಾದ ಸಾಫ್ಟ್‌ಬ್ಯಾಂಕ್ ಶುಕ್ರವಾರದಂದು ಜೊಮ್ಯಾಟೋದಲ್ಲಿರುವ ಶೇ.1.09ರ ಪಾಲುಗಾರಿಕೆಯನ್ನು ಮುಕ್ತ ಮಾರುಕಟ್ಟೆ ಮೂಲಕ ಮಾರಾಟ ಮಾಡಿದೆ. ಇದರಿಂದ ಬ್ಯಾಂಕ್‌ಗೆ 1,040 ಕೋಟಿ ರೂ. ದೊರೆತಿದೆ. ಬಂಧನ್ ಮ್ಯುಚ್ಯುಯಲ್ ಫಂಡ್, ಮೋತಿಲಾಲ್ ಓಸ್ವಾಲ್ ಮ್ಯೂಚ್ಯುಯಲ್ ಫಂಡ್ ಸೇರಿದಂತೆ ಹಲವು ಸಂಸ್ಥೆಗಳು ಈ ಷೇರುಗಳನ್ನು ಖರೀದಿಸಿವೆ.

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001

### ಡಿಮಾಂಡ್ ನೋಟೀಸ್

ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002 ರ ನಿಯಮ 3 ರ ಅನ್ವಯ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ 13(2) ರ ಅಡಿಯಲ್ಲಿ ಕೆಳ ಸಹಿದಾರರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿರುವುದರಿಂದ ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮ 2002ರ ನಿಯಮ 3ರ ಅನ್ವಯ ಸೆಕ್ಷನ್ 13(2)ರ ಅಡಿಯಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಡಿಮಾಂಡ್ ನೋಟೀಸನ್ನು ನೀಡಿ ಈ ಕೆಳಗೆ ಪಟ್ಟಿ ಮಾಡಿರುವ ಸಾಲಗಾರರು/ಅಥವಾ ಸಹ ಸಾಲಗಾರರು/ಅಥವಾ ಅಧಿಕೃತ ಉತ್ತರಾಧಿಕಾರಿಗಳು ಕೆಳಗೆ ಕೊಟ್ಟಿರುವ ವಿವರಗಳ ಪ್ರಕಾರ ಪರಸ್ಪರ ಡಿಮಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವ ಮೊಬಲಗುಗಳನ್ನು ಪರಸ್ಪರ ನೋಟೀಸ್‌ಗಳ ದಿನಾಂಕದಿಂದ 60 ದಿನಗಳ ಒಳಗಾಗಿ ಪಾವತಿ ಮಾಡಲು ಕರೆ ನೀಡಲಾಗಿದೆ. ಮೇಲೆ ತಿಳಿಸಿದ ನೋಟೀಸ್‌ಗಳ ಪ್ರತಿಗಳನ್ನು ಕೆಳ ಸಹಿದಾರರಿಂದ ಪಡೆಯಬಹುದು ಮತ್ತು ಮೇಲೆ ತಿಳಿಸಿದ ಸಾಲಗಾರರು ಇಚ್ಛಿಸಿದ್ದಲ್ಲಿ ಸಂಬಂಧಪಟ್ಟ ಪ್ರತಿಯನ್ನು ಕೆಳ ಸಹಿದಾರರಿಂದ ಯಾವುದೇ ಕೆಲಸದ ದಿನದಂದು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಮೇಲಿನದಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿದ ಸಾಲಗಾರರಿಗೆ ಮತ್ತೊಮ್ಮೆ ನೋಟೀಸ್ ನೀಡಿ ಈ ನೋಟೀಸ್ ದಿನಾಂಕದಿಂದ 60 ದಿನಗಳ ಒಳಗಾಗಿ ಕೆಳಗೆ ಪರಸ್ಪರ ಹೆಸರುಗಳಲ್ಲಿ ಸೂಚಿಸಿದ ಮೊಬಲಗುಗಳನ್ನು ಈ ಕೆಳಗೆ ತಿಳಿಸಿದ ಸಾಲಗಾರರು ನಿರ್ವಹಿಸಲಾದ ಸಾಲದ ಒಪ್ಪಂದ ಮತ್ತು ಇತರ ದಸ್ತಾವೇಜು/ಬರಹಗಳು ಯಾವುದೇ ಇದ್ದಲ್ಲಿ ಇವುಗಳ ಅನ್ವಯ ಕೆಳಗೆ ಕಲಂ (ಸಿ) ನಲ್ಲಿ ತಿಳಿಸಿದ ಪರಸ್ಪರ ದಿನಾಂಕಗಳಿಂದ ಹಣ ಪಾವತಿ ಮಾಡುವ ದಿನಾಂಕದವರೆಗೆ ಮತ್ತು / ಅಥವಾ ವಸೂಲಾಗುವವರೆಗೆ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಸಂದಾಯ ಮಾಡುವಂತೆ ನೋಟೀಸ್ ನೀಡಲಾಗಿದೆ. ವಿದ್ಯುಕ್ತವಾಗಿ ಸಾಲ ಮರುಪಾವತಿ ಮಾಡುವ ಬಗ್ಗೆ ಭದ್ರತೆಯಾಗಿ ಕೆಳಕಂಡ ಭದ್ರತೆ ಪಡೆದ ಆಸ್ತಿಗಳನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮೇಲೆ ತಿಳಿಸಿದ ಪರಸ್ಪರ ಸಾಲಗಾರರು ಅಡಮಾನ ಮಾಡಿರುತ್ತಾರೆ.

| ಕ್ರಸಂ. | ಸಾಲಗಾರರು/ಸಹಸಾಲಗಾರರು/ ಜಾಮೀನುದಾರರು | ಖಾತೆ ಸಂಖ್ಯೆ ಮತ್ತು ಬಾಕಿ ಇರುವ ಮೊತ್ತ | ಡಿಮಾಂಡ್ ನೋಟೀಸಿನ ದಿನಾಂಕ | ಸ್ಥಿರಾಸ್ತಿಗಳ/ಭದ್ರತಾ ಆಸ್ತಿಗಳ ವಿವರ |
|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) |
| (1) | ಆಂಜಿನಪ್ಪ ಮತ್ತು ಚೇತನ್ ಡೋರ್ ನಂ.1380, 1ನೇ ತಿರುವು, ಗಾಂಧಿನಗರ, ದಾವಣಗೆರೆ. | ಬಿಎಲ್-658 ರೂ.7,98,078-00 + ಇತರೆ ಖರ್ಚು, (ದಿನಾಂಕ 20-09-2023 ರ ವರೆಗೆ) | 21-10-2023 | ದಾವಣಗೆರೆ ನಗರದ 3ನೇ ವಾರ್ಡ್, 5ನೇ ಡಿವಿಜನ್, 1ನೇ ಕ್ರಾಸ್, ಗಾಂಧಿನಗರ, ದಾವಣಗೆರೆ ಡೋರ್ ನಂ.1295/2, ಚಾಲ್ತಿ ಡೋರ್ ನಂ.1380, ಅಳತೆ ಪೂರ್ವ-ಪಶ್ಚಿಮ 15 ಅಡಿಗಳು, ಉತ್ತರ-ದಕ್ಷಿಣ 30 ಅಡಿಗಳು, (4.80 X 8.20 ಮೀಟರ್ಸ್) ಇದರ ಚೆಕ್ಕುಬಂದಿ:- ಪೂರ್ವಕ್ಕೆ : ನಂದ್ಯಪ್ಪನವರ ಮನೆ, ಪಶ್ಚಿಮಕ್ಕೆ : ಚೌಡಪ್ಪನ ಮನೆ, ಉತ್ತರಕ್ಕೆ : ಮುಖ್ಯ ರಸ್ತೆ, ದಕ್ಷಿಣಕ್ಕೆ : ಕನ್ಸರ್‌ವೆನ್ಸಿ. |
| (2) | ಜಾಮೀನುದಾರರು: 1) ಎಲ್.ಎಂ. ಹನುಮಂತಪ್ಪ ಬಿನ್ ಲಕ್ಕಳ್ಳಿ ಮೈಲಪ್ಪ, ಡೋರ್ ನಂ.1364 "ಟೈಗರ್ ಹೌಸ್", 1ನೇ ತಿರುವು, ಗಾಂಧಿನಗರ, ದಾವಣಗೆರೆ. 2) ಕೆ. ತಿಪ್ಪೇಶಿ ಬಿನ್ ಲೇಟ್ ಕೆಂಚಪ್ಪ, ಡೋರ್ ನಂ.1255/2, 4ನೇ ತಿರುವು, ಗಾಂಧಿನಗರ, ದಾವಣಗೆರೆ. | | | |

* ಅನ್ವಯವಾಗುವಂತೆ ಮುಂಬರುವ ಹೆಚ್ಚಿನ ವಾರ್ಷಿಕ ಬಡ್ಡಿ, ಸುಸ್ತಿ ಬಡ್ಡಿ, ಪ್ರಾಸಂಗಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ ಹಣ ಪಾವತಿ ಮತ್ತು ವಸೂಲಿ ದಿನಾಂಕದವರೆಗೆ ಭರಿಸಬೇಕಾಗುವುದು.

ಇದರೊಂದಿಗೆ ಮೇಲೆ ತಿಳಿಸಿದ ಸಾಲಗಾರರು ಪೂರ್ವೋಕ್ತ ರೀತಿಯಲ್ಲಿ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ಗೆ ಹಣ ಪಾವತಿಸಲು ವಿಫಲರಾದಲ್ಲಿ ಆಗ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನವರು ಮೇಲೆ ತಿಳಿಸಿದ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಗಳ ವಿರುದ್ಧ ಸದರಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಮತ್ತು ಅನ್ವಯವಾಗುವ ನಿಯಮಗಳ ಮೇರೆಗೆ ವೆಚ್ಚಗಳು ಮತ್ತು ಪರಿಣಾಮಗಳಿಗೆ ಸದರಿ ಸಾಲಗಾರರು ಸಂಪೂರ್ಣವಾಗಿ ಹೊಣೆಗಾರರಾಗಿರುವರು.

ಮೇಲೆ ತಿಳಿಸಿದ ಸಾಲಗಾರರು ಮೇಲೆ ತಿಳಿಸಿದ ಕಾಯ್ದೆಯ ಅಡಿಯಲ್ಲಿ ಪೂರ್ವೋಕ್ತ ಭದ್ರತೆ ಪಡೆದ ಆಸ್ತಿ/ಸ್ಥಿರಾಸ್ತಿಯನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಪೂರ್ವಾನುಮತಿಯನ್ನು ಲಿಖಿತವಾಗಿ ಪಡೆಯದೇ ಮಾರಾಟ, ಗುತ್ತಿಗೆ ಅಥವಾ ಕಾಯ್ದೆಯ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಕೊಡಲಾದಂತೆ ಕಾರಾವಾಸ ಮತ್ತು / ಅಥವಾ ದಂಡಕ್ಕೆ ಬದ್ಧನಾಗಿರತಕ್ಕದ್ದು.

ಸಹಿ/-
**ಅಧಿಕೃತ ಅಧಿಕಾರಿ**
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಸ್ಥಳ : ದಾವಣಗೆರೆ
ದಿನಾಂಕ: 21-10-2023

**Walk-in-Interview**
21st October Onwards
Teja Technical Services working partner for Indus Towers & ATC India Tower Corporation Ltd
1. Technical Manager: Should have 5 to 7 years experience in Telecom infra equipment.(B.Tech (EIE.) / Dip in (E&C / EEE) (Tumkur & Chitradurga)
2. Technician: Diploma / ITI in (EIE / EEE / E&C), Should have 2 to 3 years exp in Telecom (infra equipment) Bellary, Davanagere, Chitradurga, Tumkur.
3. Data Analysist and Data Entry: Qualified in MS-Office with 3 to 5 years experience. (Davanagere)
4. HR MANAGER: Should have 3 to 5 years experience MBA, HR(Davanagere)
Salary: Negotiable based on Experience.
Venue:Teja Technical Service #2662, 2nd Floor Ashraya Building Opp JJM Medical College Davangere
Mob : 96064-78536, 96115-86555
sachin@tejatechnical.in

GALAXY A545G
Best Low Cost EMI of
63/- Per day
Available @
GUPTA'S SHOPPE
#19, New Murugharajendra Complex,
Opp.: DDPI Office, Davangere. Mobi.: 90351 55455

ಸರ್ವರಿಗೂ ದಸರಾ ಹಬ್ಬದ ಶುಭಾಶಯಗಳು
ಆಯುಧ ಪೂಜೆ ಹಾಗೂ ದಸರಾ ಹಬ್ಬದ ಪ್ರಯುಕ್ತ ನಮ್ಮಲ್ಲಿ ವಿಭಿನ್ನ ರುಚಿಯಲ್ಲಿ ತಯಾರಿಸಿದ ಸ್ವೀಟ್ ಬಾಕ್ಸ್‌ಗಳು ರಿಯಾಯಿತಿ ದರದಲ್ಲಿ ದೊರೆಯುತ್ತವೆ
A QUALITY PRODUCT FROM Shri Renuka SWEETS 100% COMMITTED TO QUALITY SINCE 1930
ನಮ್ಮಲ್ಲಿ ತಿಂಡಿ, ಊಟ, ಸ್ವೀಟ್ ಮತ್ತು ಚಾಟ್ಸ್ ಲಭ್ಯವಿರುತ್ತದೆ.
ಶ್ರೀ ರೇಣುಕಾ ಸ್ವೀಟ್ಸ್ C/o ಲಕ್ಷ್ ಡಿಲೈಟ್ಸ್
ಮಾವಿನತೋಪು ಆಸ್ಪತ್ರೆ ಎದುರು, ಶಾಮನೂರು ರಸ್ತೆ, ದಾವಣಗೆರೆ
PH: 95388-96927.

Gurudatt Academy
Integrated Coaching for
NEET-IITJEE-CET-2024
Tuitions for Class 8th, 9th, 10th, 1st PUC, 2nd PUC, CBSE, ICSE, CET, NEET, IIT-JEE, NDA.
Physics, Chemistry, Maths, Biology
Rangmahal, AVK College Road, Davangere.
Call : 97398 65711

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 20.10.2023 ರಂದು ನಿಧನರಾದ ಬೇತೂರು ಟ್ರೇಡರ್ಸ್ ಮತ್ತು ಬೇತೂರು ಇಂಡಸ್ಟ್ರೀಸ್ ಮಾಲೀಕರು, ಹಿರಿಯರು, ಮಾರ್ಗದರ್ಶಕರೂ ಆಗಿದ್ದ

**ಬೇತೂರು ಪ್ರಭಣ್ಣ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

- ಮಹಾದೇವಯ್ಯ, ದೀಪಾ ಎಂಟರ್‌ಪ್ರೈಸಸ್
- ಕೆ. ಶಿವಕುಮಾರ್‌ಸ್ವಾಮಿ, (SEP), ಶ್ರೀ ಸತ್ಯ ಎಂಟರ್‌ಪ್ರೈಸಸ್
- ಬಿ.ಎನ್. ನಾಗರಾಜ್,(BN) ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ
- ಬಿ.ಹೆಚ್. ಮಹೇಶ್ (YM), ಲತಾ ಎಂಟರ್‌ಪ್ರೈಸಸ್
- ಹೆಚ್.ಎಂ. ಪ್ರಕಾಶ್ (HMP), ಶ್ರೀ ಮಂಜುನಾಥ ಟ್ರೇಡರ್ಸ್
- ಎಸ್.ಎಸ್. ರಾಘುವೇಂದ್ರ ಸತ್ತೂರು
- ಜಿ.ಬಿ. ಪ್ರದೀಪ್‌ಕುಮಾರ್ (SAP) ಬಸಾಪುರ
- ಎ. ರಮೇಶ್ (AR), ಶ್ರೀ ಗೊಲ್ಲಾಳೇಶ್ವರ ಟ್ರೇಡರ್ಸ್
- ಎಸ್.ಎಂ. ವೀರೇಶ್, (SMV), ಚಂದರಗಿ ಕಲ್ಲೇಶ್ವರ ಟ್ರೇಡರ್ಸ್
- ಸಿ. ರುದ್ರೇಶ್ (CR), ಶ್ರೀ ಕೂಡಲ ಸಂಗಮೇಶ್ವರ ಕಮರ್ಷಿಯಲ್ಸ್
- ಶ್ರೀ ಬೇತೂರು ರೈಸ್‌ಮಿಲ್ & ಸಿಬ್ಬಂದಿ ವರ್ಗ, ದಾವಣಗೆರೆ.

ದಸರಾ
HONDA
ಹಬ್ಬದ ಶುಭಾಶಯಗಳು ಹಾಗೂ ವಿಶೇಷ ಕೊಡುಗೆಗಳು
Low ROI @ 6.99% | No Cost EMI | Cashback Upto ₹5000 | Down Payment ₹0
100 Pe 100 | No Hypothecation | Free Smartwatch | Free 20 Ltrs Petrol
ಗಾಡಿ ಕವರ್ ಉಚಿತ | ಬೆಳ್ಳಿನಾಣ್ಯ ಉಚಿತ | ಹೆಲ್ಮೆಟ್ ಉಚಿತ
SHRIRAM Finance | IndusInd Bank | L&T Finance | Chola | IDFC FIRST Bank
Honda EXTENDED WARRANTY 10 YEAR COVERAGE
1st Time In 2 Wheeler Industry HONDA is Giving 10 YEARS Of Extended Warranty For All Honda 2 Wheelers.
ಯಾವುದೇ ದ್ವಿ-ಚಕ್ರ ವಾಹನ ಖರೀದಿಸಿ ಗಾಡಿ ಕವರ್, ಹೆಲ್ಮೆಟ್ & ಬೆಳ್ಳಿನಾಣ್ಯವನ್ನು ಉಚಿತವಾಗಿ ಪಡೆಯಿರಿ
ಈ ಕೊಡುಗೆ 16.10.2023 ರಿಂದ 25.10.2023ವರೆಗೂ ಮಾತ್ರ
SERVICE OFFERS
Just pay INR 250/- & get AMC Book
5% Discount on Engine Oil & Spares
10% Discount on Labour Charges & Accessories
1 Water Wash Free
RGS Group of Firms
ಶ್ರೀನಿವಾಸ ಹೋಂಡಾ
ಹದಡಿ ಮುಖ್ಯ ರಸ್ತೆ, ದಾವಣಗೆರೆ-577 004
ಫೋ: 08192 - 262291 ಮೋ: 88844 27874
ಸರ್ವಿಸ್ ಸೆಂಟರ್
ಹಾಸಬಾವಿ ಸರ್ಕಲ್, ಚಾಮರಾಜಪೇಟೆ, ದಾವಣಗೆರೆ - 01 ಮೋ: 88844 27871

# ಮೈಸೂರು ದಸರಾ ಗೇಮ್ಸ್ ಸಿಎಂ ಕಪ್ 2023

## ಕುಸ್ತಿಪಟು ವಿನಯ್ ಜಿ. ಅವರಿಗೆ ಚಿನ್ನದ ಪದಕ

ದಾವಣಗೆರೆ ಕ್ರೀಡಾ ನಿಲಯದ ಕುಸ್ತಿಪಟುವಾಗಿರುವ **ವಿನಯ್ ಜಿ. (ಗಣೇಶ್)** ಇವರು ಅಂತರರಾಷ್ಟ್ರೀಯ ಕುಸ್ತಿ ತರಬೇತುದಾರರಾದ **ವಿನೋದ್ ಕುಮಾರ್ ಕೆ.** ಅವರ ಬಳಿ ತರಬೇತಿಯನ್ನು ಪಡೆದಿರುತ್ತಾರೆ.










ಶುಭ ಕೋರುವವರು : ಕೆರೆ ಗರಡಿ ಮನೆ, ರಾಜವೀರ ಮದಕರಿ ನಾಯಕ ವೃತ್ತ, (ಹೊಂಡದ ಸರ್ಕಲ್) ಗೆಳೆಯರ ಬಳಗ, ದಾವಣಗೆರೆ.